ಶ್ರೀ ಜೆ. ಎಚ್. ಪಟೀಲ್.—ತಪ್ಪಾಗಿದ್ದರೆ ಇಲೀಗಲ್ ಆಕ್ಟ್ ಆಗಿದ್ದರೆ ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ, ಮಾನ್ಯ ಮಾದೇಗೌಡರು ಸೀರಿಯಸ್ ಆಗಿ ಯಾವುದೋ ಒಂದು ವಿಚಾರವನ್ನು ಗಂಭೀರವಾಗಿ ಪ್ರಸ್ತಾಪ ಮಾಡುತ್ತಾ ಹೇಳಿದ್ದರೆ ಸ್ಟೈಟ್ ಅವೆ, ನಾವು ಸರಿ ಎಂದು ಹೇಳಿ ಬಿಡುತ್ತೇವೆ. ನಾವು ಹೇಳಿ ಬಿಟ್ಟಾಕ್ಷಣಕ್ಕೆ ಇದು ಬ್ರೀಚ್ ಆಗುತ್ತದೆಯೇ ?

ಆದ್ದರಿಂದ ಇದರ ಬಗ್ಗೆ ಮತ್ತೆ ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲ. ರೈತರಿಗೇ ಆಗಲಿ, ಮಾದೇಗೌಡರಿಗೇ ಆಗಲಿ ಅನ್ಯಾಯ ಮಾಡಿತಕ್ಕ ಉದ್ದೇಶ ಅಲ್ಲ. ಇದು ಹಣಕಾಸಿನ ಸಂಸ್ಥೆ. ಇದರಲ್ಲಿ ಷೇರು ವ್ಯಾಪಾರ ಮಾಡುತ್ತಾರೆ.

ಶ್ರೀ ಜಿ. ಮಾದೇಗೌಡ.— ಇವರು ೭–೮ ರೂಪಾಯಿನಂತೆ ಷೇರನ್ನು ವ್ಯಾಪಾರ ಮಾಡಿಕೊಂಡಿದ್ದಾರೆ ನಾನು ೧೦ ರೂಪಾಯಿ ಕೊಡಿಸುತ್ತೇನೆ, ರೈತರಿಗೆ ಷೇರುಗಳನ್ನು ಕೊಡಿಸಿ. ರೈತರಿಗೆ ಅನ್ಯಾಯವಾಗಿಲ್ಲವೆಂದು ಹೇಳುತ್ತಿದ್ದಾರೆ...

ಅಧ್ಯಕ್ಷರು.— ನೀವು ಒಂದು ಕೆಲಸ ಮಾಡಿ. ಇದರ ಬಗ್ಗೆ ಚರ್ಚೆ ಮಾಡುವುದಿದ್ದರೆ ನಿಮಗೆ ಬೇರೆ ಅವಕಾಶ ಮಾಡಿಕೊಡುತ್ತೇನೆ. ಆದರೆ ನೀವು ಈಗ ಏನು ಹಕ್ಕುಬಾಧ್ಯತಾ ಸೂಚನೆಯನ್ನು ತಂದಿದ್ದೀರಿ ಅದಕ್ಕೆ ಅನುಮತಿಯನ್ನು ನಾನು ನಿರಾಕರಿಸಿದ್ದೇನೆ. ನೀವು ಬೇರೆ ರೀತಿ ಸೂಚನೆ ಕೊಡಿ, ಅವಕಾಶ ಕೊಡುತ್ತೇನೆ. ಮಾನ್ಯ ಧರ್ಮಸಿಂಗ್‌ರವರೆ ಪ್ರಾರಂಭಿಸಿ.

## ನಿಯಮ 68ರ ಮೇರೆಗೆ

## ತೆಲುಗು-ಗಂಗಾ ಯೋಜನೆಯ ಬಗ್ಗೆ

ಶ್ರೀ ಧರ್ಮಸಿಂಗ್ (ಜೇವರ್ಗಿ).— ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಪ್ರಸ್ತಾಪ ಮಾಡಿದ ಹಾಗೆ ಕೃಷ್ಣ ಪ್ರಾಜೆಕ್ಟನ್ನು ಸರ್ಕಾರದವರು ಬಹಳ ನಿರ್ಲಕ್ಷ್ಯ ಮಾಡಿದ್ದಾರೆ, ಮತ್ತು ಇದಕ್ಕೆ ಯಾವ ರೀತಿಯಾಗಿ ಹಣವನ್ನು ಒದಗಿಸಬೇಕಾಗಿತ್ತು ಆ ರೀತಿ ಹಣವನ್ನು ಒದಗಿಸಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಈಗ ಕೆಲವು ವಿವರಗಳನ್ನು ನಾನು ಕೊಡಬಯಸುತ್ತೇನೆ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ೧೯೬೩ರಲ್ಲಿ ಪ್ರಾರಂಭವಾಯಿತು Estimated cost was Rs. 58 02 crores, area to be irrigated, 6 lakh acres. Revised in 1978, that is after 15 years, estimated cost was Rs. 283.65 crores, area targeted 4.25 lakh hec ares. Modified revision was done in 1985, estimated cost was Rs. 1,071.10 crores. area targeted was 4.25 lakh hectares. targeted completion 1995-96. Amount provided in the budget for the whole of Upper Krishna Project. ೧೯೬೩ರಲ್ಲಿ ಪ್ರಾರಂಭವಾದ ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ೧೯೬೩ರಿಂದ ೧೯೮೮ರವರೆಗೆ ಒಟ್ಟು ಪ್ರೊವೈಡ್ ಮಾಡಿದ ಹಣ ೫೩೫.೨೪ ಕೋಟಿ ರೂಪಾಯಿಗಳು. ಅದರಲ್ಲಿ ವಾಸ್ತವವಾಗಿ ಬಿಡುಗಡೆ ಮಾಡಿದ ಹಣ ೪೪೯.೩ ಕೋಟಿ ರೂಪಾಯಿಗಳು. ಅದರಲ್ಲಿ ೪೪೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವತ್ತು ೪ ೨೫ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಕೊಡಬೇಕಾಗಿದ್ದರೆ ಅದು ಕೇವಲ ೧.೭ ಲಕ್ಷ ಹೆಕ್ಟೇರ್ ಭೂಮಿಗೆ ನೀರು ಕೊಡತಕ್ಕ ಪರಿಸ್ಥಿತಿಯಲ್ಲಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಲ್ಲೂ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆಂದು ಹೇಳುತ್ತಿದ್ದೇನೆ. ಇವತ್ತು ಕೃಷ್ಣ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟಿಗೆ ಹಣ ಕೊಡ ಬೇಕಾಗಿದೆ. ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ನೇರವಾಗಿ ಏನು ಹಣ ಇಟ್ಟಿದ್ದೀರಿ ೨ದು ರಿವೈಸ್ ಆಗಿ ೨ ಸಾವಿರ ಕೋಟಿ ರೂಪಾಯಿ ಆಗುತ್ತದೆ. ಆದರಲ್ಲಿ ನೀವು ೪೪೪ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ೪.೭೫ ಲಕ್ಷ ಹೆಕ್ಟೇರ್ ಜಮೀನಿಗೆ ನೀರು ಒದಗಬೇಕಾದ ಜಾಗದಲ್ಲಿ ೧.೭೫ ಲಕ್ಷ ಹೆಕ್ಟೇರಿಗೆ ಮಾತ್ರ ಒದಗಿಸುತ್ತಿದ್ದೀರಿ. ೧೯೮೭-೮೮ರಲ್ಲಿ ಸರ್ಕಾರ ಪ್ರೊವೈಡ್ ಮಾಡಿದ್ದು ೮೫ ಕೋಟಿ ರೂಪಾಯಿಗಳಾದರೆ ಕೊಟ್ಟಿದ್ದು ೨೭.೯೮ ಕೋಟಿ ರೂಪಾಯಿಗಳು ಮಾತ್ರ. ಅದರಲ್ಲಿ ಎಸ್ಟಾಬ್ಲಿಷ್‌ಮೆಂಟ್ ಎಲ್ಲಾ ಬಂತು ೮೭–೮೮ರಲ್ಲಿ ೮ ಕೋಟಿ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿದರೂ ೨೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ. ಈ ರೀತಿ ಅಪ್ಪರ್

ಕೃಷ್ಣ ಪ್ರಾಜೆಕ್ಟಿಗೆ ಹಣ ಖರ್ಚಾಗಿದೆ. ಒಂದು ಕಡೆ ಪ್ರಧಾನ ಮಂತ್ರಿಗಳು ಮತ್ತು ಎಂ. ಪಿ. ಮುಖಂಡರು ರಾಷ್ಟ್ರದ ತೆಲುಗು ಗಂಗಾ ವಿವಾದ ಏನಿದೆ ಅದಕ್ಕೆ ಮನ್ನಣೆ ಕೊಡತಕ್ಕ ರೀತಿಯಲ್ಲಿ ಮಾಡತಕ್ಕದ್ದು ಬೇರೆ. ಈ ಬಗ್ಗೆ ಲೋಕಸಭಾ ಸದಸ್ಯರು ಕೇಳುತ್ತಾರೆ ಎಂದು ಮೊನ್ನೆ ಕೂಡ ಪ್ರಸ್ತಾಪ ಮಾಡಿದೆ. ಈ ಮೀಡಿಯಂ, ಮೇಜರ್, ಕೃಷ್ಣ ಇರಿಗೇಷನ್ ಪ್ರಾಜೆಕ್ಟ್‌ಗಳು ಏನಿವೆ ಇವೆಲ್ಲ ಒಂದು ಬೇಸಿನ್‌ನಲ್ಲಿ ಬರತಕ್ಕವು. ಅವಕ್ಕೆ ರಾಜ್ಯ ಸರ್ಕಾರದಿಂದ ಪ್ರಾಮಾಣಿಕವಾಗಿ ಏನು ಪ್ರಯತ್ನ ನಡೆದಿದೆ ಎಂಬಂದನ್ನು ಹೇಳಬೇಕಾಗುತ್ತದೆ.

ರೆಪ್ರಸೆಂಟೇಷನ್ ಮಾಡತಕ್ಕ ರೀತಿಯಲ್ಲಿ ಹೊರಟಾಗ ರಾಜ್ಯ ಸರ್ಕಾರ ಎಷ್ಟು ಖರ್ಚು ಮಾಡುತ್ತದೆ, ಎಷ್ಟು ನಿಗದಿ ಮಾಡಿದೆ ಎಂಬಂದನ್ನೂ ಹೇಳಬೇಕಾಗುತ್ತದೆ. ಈ ಸರ್ಕಾರ ಇರಿಗೇಷನ್‌ಗೆ ಪ್ರಿಯಾರಿಟಿ ಕೊಡುತ್ತಿದೆಯೇ ಎಂದು ನಾನು ಕೇಳಬೇಕಾಗಿದೆ. ೨೨೦೦ ಎ.ಡಿ.ಗೆ ಬಚಾವತ್ ಅವಾರ್ಡ್ ಮುಗಿಯುತ್ತದೆ ಎನ್.ಟಿ. ರಾಮರಾವ್ ಅವರು ಈ ಯೋಜನೆ ಕೆಲಸವನ್ನು ತೀವ್ರಗತಿಯಿಂದ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಬರತಕ್ಕ ನೀರಾವರಿ ಯೋಜನೆಗೆ ಹೆಚ್ಚು ಹಣ ಕೊಡುತ್ತೇವೆ ಎಂಬ ಮಾತನ್ನು ನಮ್ಮ ಸರ್ಕಾರದವರು ಹೇಳಿದ್ದಾರೆ. ೧-೨-೧೯೮೮ ರಂದು ನೀರಾವರಿ ಖಾತೆ ಬಗ್ಗೆ ಪ್ರಶ್ನೆ ಕೇಳಿದಾಗ ಫೆಬ್ರುವರಿ ೧೯೮೮ರವರೆಗೆ ಎಷ್ಟು ಖರ್ಚು ಮಾಡಿದ್ದೀರಿ ಎಂಬುದಕ್ಕೆ ಉತ್ತರ ಕೊಟ್ಟಿದ್ದಾರೆ. $\frac{1}{4}$ ಭಾಗದಷ್ಟು ಹಣವನ್ನೂ ಇವತ್ತು ತಾವು ಖರ್ಚು ಮಾಡಿಲ್ಲ. ಈ ರೀತಿಯ ಧೋರಣೆ ಸರ್ಕಾರದ್ದಾದರೆ, ಅಲಕ್ಷ್ಯತನ ಇದ್ದರೆ ಇನ್ನೂ ೮೦ ವರ್ಷಗಳಾದರೂ ಕೃಷ್ಣ ಮೇಲ್ದಂಡೆ ಯೋಜನೆ ಮುಗಿಯುವುದಿಲ್ಲ. ಉತ್ತರ ಕರ್ನಾಟಕದಲ್ಲಿ ಬರಗಾಲಕ್ಕೆ ಒಳಗಾಗಿರತಕ್ಕ ಜನರಿಗೆ ಹೆಚ್ಚಿನ ನೀರಿನ ಸೌಕರ್ಯ ಕಲ್ಪಿಸಿಕೊಡತಕ್ಕ ಸಂದರ್ಭದಲ್ಲಿ ಈ ರೀತಿ ಹಣ ಕಲ್ಪಿಸಿಕೊಡುತ್ತಿದ್ದರೆ ಕಷ್ಟವಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಹೇಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ ಪುಸ್ತಕದಲ್ಲಿರುವ ಅಂಕಿಅಂಶಗಳನ್ನು ಹೇಳದೆ ಸದನಕ್ಕೆ ಬೇರೆ ಉತ್ತರ ಕೊಡಬೇಕು. ತೆಲುಗು ಗಂಗಾ ಪ್ರಾಜೆಕ್ಟ್ ಬಗ್ಗೆ ನ್ಯಾಷನಲ್ ಲೆವೆಲ್‌ನಲ್ಲಿ ಹೋರಾಡುವುದಕ್ಕೆ ನಾವು ನಿಮ್ಮ ಜೊತೆಯಲ್ಲಿದ್ದೇವೆ ಪ್ರಧಾನ ಮಂತ್ರಿಯವರಿಗೆ ನಾವೂ ಹೇಳುತ್ತೇವೆ. ಆ ಭಾಗದಲ್ಲಿ ಇರತಕ್ಕ ಪ್ರಾಜೆಕ್ಟ್‌ಗೆ ರಾಜ್ಯ ಬೊಕ್ಕಸದಿಂದ ಖರ್ಚು ಮಾಡುತ್ತೇವೆ ಎಂಬ ಸ್ಪಷ್ಟವಾದ ಉತ್ತರವನ್ನು ಕೊಡಬೇಕು ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಈ ತೆಲುಗು ದೇಶಂ ಬಗ್ಗೆ ಪ್ರಸ್ತಾಪ ಆಗುತ್ತಿರುವುದು ಇದು ಮೊದಲಲ್ಲ.

ಒಬ್ಬ ಸದಸ್ಯರು.—ತೆಲುಗು ದೇಶಂ ಅಲ್ಲ, ತೆಲುಗು ಗಂಗಾ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎನ್.ಟಿ. ರಾಮರಾವ್ ಅವರಿಗೆ ತೆಲುಗು ದೇಶಮ್ಮೇ ಆಗಿದೆ. ತೆಲುಗು ಬಗ್ಗೆ ವಿವರವಾದ ವಿಶ್ಲೇಷಣೆಯನ್ನು ನಮ್ಮ ಉಪನಾಯಕರು ಮಾಡಿದ್ದಾರೆ. ಅವರು ಹೇಳಿದ್ದನೇ ಪುನ: ಹೇಳಬೇಕಾದ ಪ್ರಸಂಗಕ್ಕೆ ನಾನು ಹೋಗುವುದಿಲ್ಲ. ಈ ವಿಷಯ ಇಲ್ಲಿ ಚರ್ಚೆ ಆಗುತ್ತಾ ಇರುವಾಗಲೇ ಸರ್ಕಾರದವರು ಒಂದು ಪೇಪರನ್ನು ಸರ್ಕ್ಯುಲೇಟ್ ಮಾಡಿದ್ದಾರೆ. ಅದರಲ್ಲಿ ಬಹಳಷ್ಟು ವಿವರ ಕೂಡ ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿಸ್ತಾರವಾಗಿ ಹೇಳತಕ್ಕ ಪ್ರಶ್ನೆ ಉದ್ಭವವಾಗುವುದಿಲ್ಲ. ನಾವು ಈ ಪ್ರಶ್ನೆಯನ್ನು ಎತ್ತಿದಂಥ ಹಿನ್ನೆಲೆಯಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಸರ್ಕಾರದವರು ಕೊಟ್ಟಿರುವ ಪತ್ರಿಕೆಯಲ್ಲಿ ಹೇಳಿರುವ ಪ್ರಕಾರ ಏನು ಗೋಚರವಾಗುತ್ತದೆ ಅಂದರೆ ಇವತ್ತು ನಮಗೆ ಬಚಾವತ್ ಅವಾರ್ಡ್ ಪ್ರಕಾರವೇ ನೀರಿನ ಹಂಚಿಕೆಯಲ್ಲಿ ಅನ್ಯಾಯವಾಗಿದೆ. ನ್ಯಾಯವಾದ ಪಾಲು ಅದರಲ್ಲಿ ಸಿಗಲಿಲ್ಲ ಎಂಬುದು ಗೊತ್ತಾಗುತ್ತದೆ. ತೆಲುಗು ಗಂಗಾ ಯೋಜನೆ ಹೇಗೆ ಪ್ರಾರಂಭವಾಯಿತು ? ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಪತ್ರಿಕಾ ಪ್ರಕಟಣೆಯೊಂದನ್ನು ಓದಿದರು. ನನ್ನ ಹತ್ತಿರ ಫೋಟೊಸ್ಟಾಟ್ ಕಾಪಿ ಕೂಡ ಇದೆ. "Note on Development of Irrigation in drought areas in Krishna Basin" ಎಂದು ಕರ್ನಾಟಕ ಸರ್ಕಾರ ಪ್ರಕಟ ಮಾಡಿದಂಥಾದ್ದಿದೆ. It pertains to utillisation of surplus flows in the river. ಅದರ ಸಾರಾಂಶವನ್ನು ಅವರು ಓದಿ ಹೇಳಿರುವುದರಿಂದ ನಾನು ಪುನ: ಓದುವುದಿಲ್ಲ. ಎನ್. ಟಿ. ರಾಮರಾವ್ ಅವರು ಮುಖ್ಯ ಮಂತ್ರಿಗಳಾದಮೇಲೆ ೧೯೮೪ರಲ್ಲಿ ಆಂಧ್ರ ಪ್ರದೇಶ ಸರ್ಕಾರದ ಅಧಿಕೃತ ಹೇಳಿಕೆ ಪ್ರಕಾರವೇ ನಮ್ಮ ಪಾಲಿನ ನೀರನ್ನು ಅವರ ಯೋಜನೆಯಲ್ಲಿ ತೋರಿಸುವ ಯೋಜನೆ ಸಿದ್ಧ ಪಡಿಸಿ ಅದರ ಅನುಷ್ಠಾನವೂ ಆಗಿದೆ. ಕಾರ್ಯಗತವಾಗಿದೆ.

Commissioned all those projects to utilise full complement of their share of water under the award. ಆದ್ದರಿಂದ ಸರ್‌ಪ್ಲಸ್ ವಾಟರ್‌ಗೆ ಅಥವಾ ಫ್ಲಡ್ ವಾಟರ್‌ಗೆ ಯಾವುದೇ ಒಂದು ಹೊಸ ಯೋಜನೆಯನ್ನು ಮಾಡುವುದಕ್ಕೆ ಇಡೀ ದೇಶದ ನೀರಾವರಿ ನೀತಿಯ ಪ್ರಕಾರ, ಅಥವಾ ತಾಂತ್ರಿಕ ವ್ಯವಸ್ಥೆಯ ಪ್ರಕಾರ, ಅಥವಾ ವಿಶ್ವದ ಒಂದು ನೀರಾವರಿ-ತಾಂತ್ರಿಕ ವ್ಯವಸ್ಥೆಯ ಪ್ರಕಾರ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಅವರು ಪತ್ರಿಕೆಯ ಮುಖಾಂತರವಾಗಿ ಪ್ರಕಟಪಡಿಸಿದ್ದಾರೆ. ಆ ರೀತಿ ಪ್ರಕಟಪಡಿಸಿದ ಮೇಲೂ ಇದು ಯಾವ ಹಂತದಲ್ಲಿದೆ ಎಂದರೆ, ಯಾವ ಯಾವ ಮಟ್ಟದಲ್ಲಿ ಹೋಗುತ್ತಿದೆ ಎಂಬುದನ್ನು ಸ್ವಲ್ಪ ಈ ಸಂದರ್ಭದಲ್ಲಿ ಪರಿಶೀಲನೆ ಮಾಡಬೇಕಾದುದು ಮತ್ತು ತಿಳಿಯಬೇಕಾದ ಒಂದು ಅಪಶ್ಯಕತೆ ಕೂಡ ಇದೆ ತೆಲುಗು ಗಂಗಾ ಅಂದರೆ, ಕರ್ನಾಟಕ ರಾಜ್ಯ ತನ್ನ ಪಾಲಿನ ನೀರಿನಲ್ಲಿ ೫ ಟಿ.ಎಂ.ಸಿ.ಯನ್ನು, ಮಹಾರಾಷ್ಟ್ರ ೫ ಟಿ. ಎಂ. ಸಿ. ನೀರನ್ನು ಅದೇ ರೀತಿ ಆಂಧ್ರಪ್ರದೇಶ ತನ್ನ ಪಾಲಿನ ನೀರಿನಲ್ಲಿ ೫ ಟಿ.ಎಂ.ಸಿ.ಎಫ್.ಟಿ.ಯನ್ನು ಮದ್ರಾಸ್ ನಗರಕ್ಕೆ ಕುಡಿಯುವ ನೀರನ್ನು ಒದಗಿಸಬೇಕೆಂದು ಸಪ್ಲಿಮೆಂಟ್ ಅಗ್ರಿಮೆಂಟ್ ಪ್ರಕಾರ ಆದಂಥದ್ದು. ಆ ಒಂದು ಅಗ್ರಿಮೆಂಟ್‌ಗೆ ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಮದ್ರಾಸ್ ನಗರಕ್ಕೆ ಹೋದರು ಅಂದು. ಆದರೆ ಆಗಲೇ ಅವರು ಧೈರ್ಯ ಮಾಡಿಕೊಂಡರು, ಮತ್ತು ಈ ಯೋಜನೆಗೆ ಕೈ ಹಾಕಿದರು. ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೈದರಾಬಾದ್‌ನಲ್ಲಿ ಕೊಟ್ಟಂಥ ಹೇಳಿಕೆ, ಮದ್ರಾಸ್‌ನಲ್ಲಿ ಕೊಟ್ಟಂಥ ಹೇಳಿಕೆ. ಇನ್ನೂ ಕೆಲವು ಕಡೆ ಹೋಗುವಾಗ ಜನರಿಗೆ ಅಭಿಪ್ರಾಯ ಮಾಡಿದ್ದು ಹೇಗೆಂದರೆ ತೆಲುಗು ಗಂಗಾ ಯೋಜನೆಗೆ ನಮ್ಮ ಆಕ್ಷೇಪಣೆ ಇಲ್ಲ ಎಂದರು. ಕರ್ನಾಟಕ ಸರ್ಕಾರದ ಆಕ್ಷೇಪಣೆ ಇಲ್ಲ ಎಂದು ಹೇಳಿದ ಮೇಲೆ ಅವರು ಒಂದು ಹೆಜ್ಜೆ ಮುಂದೆ ಹೋದರು. ಆಲ್ಲಿಯವರೆಗೆ ಅವರಿಗೆ ಧೈರ್ಯ ಇರಲಿಲ್ಲ. ಒಂದು ವೇಳೆ ಅದನ್ನು ತೆಗೆದುಕೊಂಡಿದ್ದರೂ, ನೀರಾವರಿ ಉಪಯೋಗ ಮಾಡಿಕೊಳ್ಳಬೇಕೆಂದು ನಿರ್ಣಯವನ್ನು ತೆಗೆದು ಕೊಂಡ ಮೇಲೂ ಕೂಡ ಕೃಷ್ಣ ನದಿಯಿಂದ ನೀರನ್ನು ತೆಗೆದುಕೊಳ್ಳಬೇಕೆಂದು ಇರಲಿಲ್ಲ. ೨ನೇ ಹಂತದಲ್ಲಿ they wanted to give a cover as Godavari water. ಗೋದಾವರಿಯಲ್ಲಿ ೨೦ ಟಿ.ಎಂ.ಸಿ. ನೀರು ಅವರ ಪಾಲು ಏನು ಇದೆ, ಅದನ್ನು ಕೃಷ್ಣಾ ನದಿಗೆ ಡೈವರ್ಟ್ ಮಾಡಿ, ಅಲ್ಲಿಂದ ರೀ-ಜನರೇಷನ್ ತೆಗೆದುಕೊಂಡು, ಸಪ್ಲೈ ಮಾಡಿಕೊಂಡು ತೆಲಂಗು ಗಂಗಾ ಯೋಜನೆಯನ್ನು ೨ನೇ ಹಂತದಲ್ಲಿ ಮಾಡಬೇಕು ಎಂಬ ಆಲೋಚನೆಯನ್ನು ಅವರು ಮಾಡಿದ್ದರು. ಆದರೆ ತೆಲುಗು ಗಂಗಾ ಯೋಜನೆಗೆ ನಮ್ಮ ಆಕ್ಷೇಪಣೆ ಇಲ್ಲ ಎಂದು ಇವರು ಹೇಳಿದ ಮೇಲೆ ಅವರಿಗೆ ಒಂದು ರೀತಿಯ ನೈತಿಕ ಬೆಂಬಲ ಸಿಕ್ಕಿತು. May not be physically..... ನೈತಿಕ ಬೆಂಬಲ ಕರ್ನಾಟಕ ರಾಜ್ಯ ದಿಂದ ಬಂದಿದೆ ಎಂಬ ಅಭಿಪ್ರಾಯ ಶ್ರೀಮಾನ್ ಎನ್.ಟಿ. ರಾಮರಾವ್‌ರವರಿಗೆ ಬಂತು. ಆಗ ಅವರು ಒಂದೊಂದೇ ಕಳ್ಳ ಹೆಜ್ಜೆಯನ್ನು ಮುಂದೆ ಹಾಕುತ್ತಾ ಬಂದರು. ಇವತ್ತು ಅವರು ದೊಡ್ಡ ಹೆಜ್ಜೆಯನ್ನೇ ಹಾಕಿಬಿಟ್ಟಿದ್ದಾರೆ. ನವೆಂಬರ್‌ನಲ್ಲಿ ಒಂದು ಹೇಳಿಕೆ ಪತ್ರಿಕೆಯಲ್ಲಿ ಬಂತು. ಅದೂ ಹೈದರಾಬಾದ್ ನಿಂದ ಬಂದಂತಹ ಹೇಳಿಕೆ. One more hurdle of Telugu Ganga Project has been removed with the clearance reportedly given by the Union Ministry of Environment. ಎನ್‌ವೈರ್ನಮೆಂಟ್ ಇಲಾಖೆಯಿಂದ ಕ್ಲಿಯರ್ ಆಗಿದೆ ಎಂದು ವರದಿ ಬಂದಿದೆ. ಆದರೆ ಆ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆ, ಪ್ರತಿಭಟನೆ ನಮಗಂತೂ ಕಾಣಲಿಲ್ಲ. ಬರೀ ಕಾಗದ ಬರೆಯುವುದನ್ನು ಬಿಟ್ಟರೆ ಸನ್ಮಾನ್ಯ ದೇವೇಗೌಡರು ಮಂತ್ರಿಯಾಗಿದ್ದಾಗ ಕೊಟ್ಟಂತಹ ಹೇಳಿಕೆಯನ್ನು ಬಿಟ್ಟರೆ ಬಾಕಿ ಯಾವುದೇ ರೀತಿಯ ಪ್ರತಿಭಟನೆ ಇವರಿಂದ ಇಲ್ಲ. ಅವರು ನವೆಂಬರ್ ತಿಂಗಳಲ್ಲಿ ಕ್ಲಿಯರೆನ್ಸ್ ಮಾಡಿದರಂ. ತೆಲುಗು ಗಂಗಾದ ಬಗ್ಗೆ ಕೇಂದ್ರ ಸರ್ಕಾರ ಕೂಡ ಸ್ಪಷ್ಟವಾದ ನಿಲುವನ್ನು ಪಾರ್ಲಿಮೆಂಟ್‌ನಲ್ಲಿ ಕೊಟ್ಟಿದೆ. ಅಂದು ನೀರಾವರಿ ಸಚಿವರಾಗಿದ್ದ ಸನ್ಮಾನ್ಯ ಬಿ. ಶಂಕರಾನಂದ್‌ರವರು ಕರ್ನಾಟಕದ ಪ್ರತಿನಿಧಿಯಾಗಿ ಹೇಳಿಕೆಯನ್ನು ಕೊಟ್ಟಿಲ್ಲ. ರಾಷ್ಟ್ರದ ನೀರಾವರಿ ಖಾತೆಯ ಮಂತ್ರಿಗಳಾಗಿ ಇದನ್ನು ನಿರ್ವಹಣೆ ಮಾಡತಕ್ಕವರಾಗಿದ್ದು ಒಂದು ಹೇಳಿಕೆಯನ್ನು ಕೊಟ್ಟರು.

ಅವರು ಧೈರ್ಯವಾಗಿ ಹೇಳಿಕೆಯನ್ನು ಕೊಟ್ಟರು. ಅವರು ಹೇಳಿಕೆಯನ್ನು ಕೊಟ್ಟಾಗ ಲೋಕಸಭೆಯಲ್ಲಿ ದೊಡ್ಡ ಗಲಭೆ ಆಯಿತು. ಅಲ್ಲಿ ಸಾಕಷ್ಟು ಗೊಂದಲವಾಯಿತು. ಅವರನ್ನು ಅಪಮಾನ ಮಾಡತಕ್ಕ ಪ್ರಸಂಗ ಬಂತು. ಅವರು ಅಪಾಲಜಿ ಕೇಳಬೇಕೆಂದು ಹೇಳಿಕೆ ಬಂತು. But, this government of Karnataka which is predominantly interested in it, did not raise its little finger in defence of centres's stand, ಇವೊತ್ತು

ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ, ಕೇಂದ್ರದ ಸಂಪುಟದ ಸಚಿವರಾಗಿದ್ದ ಶಂಕರಾನಂದ ಅವರು, ರಾಜಕೀಯವಾಗಿ ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸತಕ್ಕವರು, ಕರ್ನಾಟಕದ ನೀರಿನ ಹಕ್ಕಿಗಾಗಿ as an advocate of Karnataka, he did not argue, But, he did take up the issue as a person presiding over that particular department. The entire state of Karnataka should have stood by him. The notice was created practically by the entire Opposition. ಬರೀ ತೆಲುಗುದೇಶದ ಎಂ.ಪಿ.ಗಳು ಮಾತ್ರ ಅಲ್ಲ. All Opposition benches in Lok Sabha, we got that impression, stood by Telugu-Desham project and stood by Andhra Pradesh and Karnataka looked very small before the eyes of the Lok Sabha, the highest forum of democracy. ಆ ಸ್ಥಾನದಲ್ಲಿ ಇರುವಾಗ ಮಾನ್ಯ ಮುಖ್ಯ ಮಂತ್ರಿಗಳು ತುಟಿಪಿಟಿಕ್ ಎನ್ನಲಿಲ್ಲ. He never came to the defence, or never defended his own people. ಏನು ಅಧ್ಯಕ್ಷರೇ ? ಇಷ್ಟು ದುರ್ಬಲವಾದ ನೀತಿ ಏಕೆ ? ಇವತ್ತು ಸೆಂಟ್ರಲ್ ಗೌರ್ನಮೆಂಟ್ ಕೂಡಾ ಕರ್ನಾಟಕದ ಪರವಾಗಿ ಇದೆ ಎಂದು, ಇದು ನ್ಯಾಯ ಎಂದು ಹೇಳಿ ತಿಳಿದುಕೊಳ್ಳುವುದು ಕೂಡಾ, a little finger is not raised by the leader of this House and the person who is presiding over the government of Karnataka. ಆ ಮೇಲೆ ಡೆವಲಪ್‌ಮೆಂಟ್ ಏನಾಯಿತು ? ನಮ್ಮ ಅಧಿಕಾರಿಗಳು ಡಿಸ್ಕಷನ್ಸ್‌ಗೆ ಹೋದರು. ಈ ಮಧ್ಯೆ ನಮ್ಮ ನೀರಾವರಿ ಸಚಿವರಾಗಿದ್ದ ದೇವೇಗೌಡರು ಕೂಡಾ ಆ ಮೇಲೆ ದೆಹಲಿಗೆ ಹೋದರು. ಆಗ ನಾನೂ ಕೂಡ ಬೇರೆ ಕೆಲಸಾರ್ಥವಾಗಿ ನಾನು ದೆಹಲಿಯಲ್ಲಿ ಇದ್ದೆ. ನಾನು ತಿಳಿದ ಸಮಾಚಾರ ಎಂದರೆ, ಹೆಜ್ಜೆಹೆಜ್ಜೆಯಲ್ಲಿ ಅವರಿಗೆ ಧೈರ್ಯ ಬಂತು. ಕೇಂದ್ರ ನಮ್ಮ ಸರ್ಕಾರದ ಪರವಾಗಿ ಬಂದರೂ ಕೂಡಾ ನ್ಯಾಯವಾದ ಹೋರಾಟಕ್ಕೆ ನಮ್ಮ ಮುಖ್ಯಸ್ಥರು ದುರ್ಬಲ ನೀತಿಯನ್ನು ತೋರಿಸಿದರು. What should the Government of India do ? There is no point in blaming them. They have worked out a working plan, working table. ಏನು ಲೆಕ್ಕ ? ಸೆಂಟ್ರಲ್ ವರ್ಕಿಂಗ್ ಕಮಿಷನ್ ಅವರು ಒಂದು ವರ್ಕಿಂಗ್ ಟೇಬಲ್ ಎಂದು ಮಾಡಿದರು. ನೀರಾವರಿಯ ಇತಿಹಾಸಕ್ಕೆ, ನೀರಾವರಿಯ ಧರ್ಮಕ್ಕೆ ನೀರಾವರಿಯ ನೀತಿಗೆ ತೀರಾ ವಿರುದ್ಧವಾದ ಒಂದು ವರ್ಕಿಂಗ್ ಟೇಬಲ್. ಇದು ಬಚಾವತ್ ಅವಾರ್ಡ್‌ಗೆ ಕೂಡಾ ವಿರುದ್ಧ ಇದೆ. It is rather running absolutely parallel to the Bachawat award. ಇದಕ್ಕೆ ವರ್ಕಿಂಗ್ ಟೇಬಲ್‌ನ್ನು ಮಾಡಿದರು. ನಮಗೆ ಏನು ಹೇಳುತ್ತಾರೆ ಎಂದರೆ,

> "We find this Telugu Ganga project technically feasible. We are going to clear this technically and we are going to place this before the advisory committee of the Central Water Commission, on 25th March:"

ಮಾನ್ಯ ಮುಖ್ಯ ಮಂತ್ರಿಯವರು ಮೊನ್ನೆ ಹೇಳಿದರು, ಇದು ಇನ್ನೂ ಕ್ಲಿಯರ್ ಆಗಲಿಲ್ಲ, ಏನೂ ಆಗಿಲ್ಲ ಎಂದು ಹೇಳುವ ಹೇಳಿಕೆ ಬಂದಿದ್ದಾಯಿತು. ಈ ರೀತಿ ಸಲಿಗೆ ಕೊಟ್ಟುಕೊಟ್ಟು we have emboldened our rival claims because the pressure is not there. ಆದೇ ಆಗಲಿ ಎಂದು ತಾವು ಕುಳಿತಿದ್ದೀರಿ ಎಂದು ನಾನು ಆಪಾದನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. But, it is a feeble stand. 'Technically it is feasible' ಎಂದು ಹೇಳಿದ್ದಾರೆ. ಆದೂ ಕೂಡಾ ಯಾವರೀತಿ ಕ್ಲಿಯರ್ ಮಾಡುತ್ತಾರೆಂದು ಹೇಳಿದರೆ, ವರ್ಕಿಂಗ್ ಟೇಬಲ್ ಇದು ನ್ಯೂ ಪ್ರಾಜೆಕ್ಟ್ಸ್ ಆಗುವುದಿಲ್ಲ ಎಂದು ಹೇಳುವಾಗ ತೆಲುಗು ಗಂಗಾ ಮಾತ್ರ ಮಾಡಿಲ್ಲ ಅವರು, ತೆಲುಗುಗಂಗಾ ಕೂಡಾ ಆಗುವುದಿಲ್ಲ ಎಂದು ಮುಂಜಿ ಹೇಳಿದ್ದರು.

ತೆಲುಗು ಗಂಗಾ ಇ ಟಿ.ಎಂ.ಸಿ.ಎಫ್.ಟಿ. ಯಲ್ಲಿ ಆಗುತ್ತದೆ. According to their working table the Sri Sailam Left Bank Canal 30 TMCFT they get substantial component in this, and in Sri Shailam Right Bank there has to be the saving of 19 TMCFT 78 TMCFT is a clear allocation for

the Andhra Pradesh in the scheme of things and in the working table which is prepared by the Central Water and Power Commission. According to the working table finally drawn from all the premises the conclusion is 695 TMCFT for Karnataka, 555 TMCFT for Maharastra and rest of it for Andhra Pradesh. ಎಷ್ಟು ಮುಂದೆ ಹೋಗಿ ನಾ ದ್ದಾರೆಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೇ ? ಎಲ್ಲಾ ನೀರು ಆಂಧ್ರಪ್ರದೇಶಕ್ಕೆ ಹೋಗುತ್ತದೆ. ಕ್ಲೇಮ್ (ಎ) ಪ್ರಕಾರ ಆದರ ಟೇಬಲ್ ಪ್ರಕಾರ ಬರಬೇಕಾದ ೭೩೪ ಟಿಎಂಸಿಎಫ್‌ಟಿ ಕೂಡ ಬರುವುದಿಲ್ಲ. ಪಾರ್ಟ್ (ಎ) ಪ್ರಕಾರ ನಮಗೆ ೭೩೪ ಟಿಎಂಸಿಎಫ್‌ಟಿ ನೀರು ಸಿಗುತ್ತಿತ್ತು. Even I think it has got reduced according to the working table to the extent of 695 TMCFT. ಪಾರ್ಟ್ (ಜಿ) ಸ್ಕೀಮ್ ಇಂಪ್ಲಿಮೆಂಟ್ ಆದರೆ ೨೦೦೦ ಇಸವಿ ಆಗುವಾಗ ೭೦೦+೧೬೬ ಟ್ಟು ನಮಗೆ ೪೬೬ ಟಿಎಂಸಿಎಫ್‌ಟಿ ಬರಬೇಕಾಗಿತ್ತು. ಈ ಫಾರಮ್ಲ್ಲಿಂದ ನಮಗೆ ೧೬೬ ಟಿಎಂಸಿ ಎಫ್‌ಟಿ ಕಡಿಮೆಯಾಗುತ್ತದೆ. ಅಷ್ಟನ್ನು ನಮಗೆ ಖೋತ ಮಾಡತಕ್ಕ ವರ್ಕಿಂಗ್ ಟೇಬಲ್ ಬಗ್ಗೆ ಸೆಂಟ್ರಲ್ ವಾಟರ್ ಕಮಿಷನ್ ಅಧ್ಯಕ್ಷರು ಬಹಳ ದೊಡ್ಡದಾಗಿ ಹೇಳಬೇಕಾದರೆ ಇವತ್ತು ಟೆಕ್ನಿಕಲ್ ಫಾರಮ್ಲ್ಲಿದ ಪ್ರಕಾರ ಸರ್‌ಪ್ಲಸ್ ೭೫ರಷ್ಟು ಡಿಪೆಂಡಬಲಿಟಿ ಕನ್ಸಿಡರ್ ಮಾಡಬೇಕಾಗಿತ್ತು. ಆದರೆ ವರ್ಕಿಂಗ್ ಟೇಬಲ್‌ನಲ್ಲಿ ೭೫ರಷ್ಟು ಡಿಪೆಂಡಬಲಿಟಿ ತೆಗೆದುಕೊಂಡಿದ್ದಾರೆ. ಬಚಾವತ್ ಕಮಿಷನ್ ರಿಪೋರ್ಟ್ ಪ್ರಕಾರ ಆದರಲ್ಲಿ ಪಾರ್ಟ್ (ಎ) ಸ್ಕೀಮ್ ಪ್ರಕಾರ ಲೆಜಿಟಮೇಟ್ ರೈಟ್ ನಮಗೆ ಅಲಾಟ್ ಆಗಬೇಕಾಗಿತ್ತು, ಆದರಲ್ಲಿ ೫೦ ಪರ್ಸೆಂಟ್ ಸಿದುಕೊಳ್ಳತಕ್ಕ ತೆಲುಸಪನ್ನು ಸೆಂಟ್ರಲ್ ವಾಟರ್ ಕಮಿಷನ್ ಮಾಡಿದೆ ಆಗ ನಮ್ಮ ಲೋಕಸಭಾ ಸದಸ್ಯರು ಗಲಾಟೆ ಮಾಡಿದರು, ಮಾನ್ಯ ದೇವೆಗೌಡರು ದೆಹಲಿಗೆ ಹೋಗದಿದ್ದರೆ ೨೫ನೇ ಮಾರ್ಚಿಯಲ್ಲಿ ಒಂದು ತೀರ್ಮಾನವನ್ನು ಈ ಬಗ್ಗೆ ತೆಗೆದುಕೊಳ್ಳಲಿಕ್ಕೆ ಹೊರಟ್ಟಿದ್ದರು. ಮೊದಲೇ ಈ ಬಗ್ಗೆ ಎಚ್ಚರಿಕೆ ಪಡಿಸಿದ್ದರೆ ಬರಗಾಲಪೀಡಿತ ೆ ಜಿಲ್ಲೆಗಳು ಏನಿವೆ ಅವುಗಳಿಗೆ ಇಂತಹ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಇಂತಹ ಒಂದು ಅನಾಹುತವನ್ನು ನಾವು ಕಣ್ಣಿದ್ದೂ ಕುರುಡರಾಗಿ ನೋಡತಕ್ಕ ಪರಿಸ್ಥಿತಿ ಕರ್ನಾಟಕ ರಾಜ್ಯದ ಜನತೆಗೆ ಬಂದಿದೆ, ಆದಕ್ಕಾಗಿ ನಾವು ಇದರ ಗಂಭೀರತೆಯನ್ನು ನೋಡಿ ಚರ್ಚೆ ಮಾಡುತ್ತಿದ್ದೇವೆ. ತೆಲಂಗುಗಂಗಾ ಯೋಜನೆ ಏನಿದೆ ಅದು ೨೯ ಟಿಎಂಸಿಎಫ್‌ಟಿ ಮಾತ್ರ ಅಲ್ಲ. ಅದು ೧೫೦ ಟಿಎಂಸಿಎಫ್‌ಟಿ ಯಿಂದ ೨೦೦ ಟಿಎಂಸಿಎಫ್‌ಟಿಯವರೆಗೆ ಹೋಗತಕ್ಕ ಪರಿಸ್ಥಿತಿಯನ್ನು ತೆಲುಗುಗಂಗಾ ಯೋಜನೆಯ ಮೂಲಕ ಮಾಡಲಿಕ್ಕೆ ಇವತ್ತು ಅವರು ತಯಾರು ಮಾಡಿತ್ತಿದ್ದಾರೆ. ಅವರು ಮಾಡಲಿಕ್ಕೆ ಹಕ್ಕಿಲ್ಲ, ನೀವು ಇಲ್ಲಿ ಅವರು ಓಡಿ ಹೋಗುತ್ತಾರೆಂದು. ಹೇಳಬಹುದು ಹಕ್ಕು ಹೋಗುವುದಿಲ್ಲ, ನಮ್ಮ ಹಕ್ಕು ಅಲ್ಲಿ ಇರುವುದೇ ಇಲ್ಲ. It will not subsist at all. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ನೀವು ಇಂಪ್ಲಿಮೆಂಟ್ ಮಾಡತಕ್ಕ ದಾಟಿಯನ್ನು ಇವತ್ತು ನಮ್ಮ ಶಾಸಕರಾದ ಧರ್ಮಸಿಂಗ್‌ರವರು ಸ್ಪಷ್ಟವಾಗಿ ಹೇಳಿದರು. ಅದಕ್ಕೆ ಹಣ ಕೊಡುವ ಬಗ್ಗೆ ನಿರ್ಣಯವಾಗಿದೆ. ೨೦೦ ಕೋಟಿ ರೂಪಾಯಿಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ೧೦೦ ಕೋಟಿ ರೂಪಾಯಿಗಳನ್ನು ಕಾವೇರಿ ಜಲಾನಯನ ಪ್ರದೇಶಗಳಿಗೆ ಕೊಟ್ಟಿದ್ದೀರಿ. ನಾವು ಕೇಳಿದ್ದುದು ಕೃಷ್ಣಾ ಮೇಲ್ದಂಡೆ ಯೋಜನೆಗೆ ೩೦೦ ಕೋಟಿ, ಕಾವೇರಿ ಜಲಾನಯನ ಪ್ರದೇಶಕ್ಕೆ ೨೦೦ ಕೋಟಿ ಆದರಾತೆ ತಾವು ಅವಸರದಾಗಿ ಕಾವೇರಿ ಜಲಾನಯನ ಪ್ರದೇಶಕ್ಕೆ ೧೦೦ ಕೋಟಿ ರೂಪಾಯಿಗಳನ್ನು, ಕೃಷ್ಣಾ ಮೇಲ್ದಂಡೆ ಯೋಜನೆಗೆ ೨೦೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿರ್ಣಯ ಮಾಡಿದ್ದೀರಿ. ಅದು ಬರೀ ಕಾಗದದ ಮೇಲೆ ಉಳಿಯಿತು.

೩.೦೦ ಪಿ. ಎಂ.

ನಮ್ಮ ಕರ್ನಾಟಕದ ಯೋಜನಾ ಇಲಾಖೆಯವರು ಅಥವಾ ಹಣಕಾಸಿನ ಇಲಾಖೆಯವರು, ಆ ಕಾಗದವನ್ನು ಚೂರುಚೂರು ಮಾಡಿಬಿಟ್ಟಿದ್ದಾರೆ. ಇದಕ್ಕೆ ಯಾವ ಲಕ್ಷ್ಯವನ್ನೂ ಕೂಡ ಕೊಡಲಿಲ್ಲ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಸ್ಟೇಜ್-೧ಗೆ ಪ್ರಾವಿಜನ್ ಇರತಕ್ಕಂಥ ದ್ದು ೨೧೦ ಕೋಟಿ ರೂಪಾಯಿಗಳು. ಆದರ ಪ್ರಕಾರ ೪೫ ಕೋಟಿಯನ್ನು ಮಾತ್ರ ಖರ್ಚು ಮಾಡಬಹುದು ಘಟಪ್ರಭಾ ೭೫, ಮಲಪ್ರಭಾ ೧೦೦ ಕೋಟಿ ಎಂದರೆ ಒಟ್ಟು ಉತ್ತರ ಕರ್ನಾಟಕ ಎಂದು ಏನು ಹೇಳುತ್ತೀರಿ. ಮುಂಬೈ ಕರ್ನಾಟಕ, ಹೈದರಾಬಾದ್ ಬಾಗ ಇದ್ದು ಇಲ್ಲಿ ಕಾರಂಜೀಯಾ ಸೇರಿ ಕೃಷ್ಣಾ ಜಲಾನಯನಕ್ಕೆ ೪೩೫ ಕೋಟಿ ೭ನೇ ಪಂಗಾವಾರ್ಷಿಕ ಯೋಜನೆಯಲ್ಲಿ ಇರತಕ್ಕಂಥಾದ್ದು

ಅನ್ ಅಪ್ರೂವ್ಡ್ ಪ್ರಾಜೆಕ್ಟ್ ಕಾವೇರಿ ಬೇಸಿನ್‌ನಲ್ಲಿ ೩೩೫ ಕೋಟಿ ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಇರುವಂಥದ್ದು. ಆದರೆ ಒಟ್ಟು ಇವತ್ತಿನದಿವಸ ಈ ಕೃಷ್ಣಾ ಜಲಾನಯನದಲ್ಲಿ ಮಾಡಿದಂಥ ಯೋಜನೆಯಲ್ಲಿ ಎಷ್ಟು ನೀರನ್ನು ಉಗಯೋಗ ಮಾಡಬಹುದು ? ಇವತ್ತು ೪೦೦ ಟಿಎಂಸಿಎಫ್‌ಟಿ ನೀರನ್ನು ಉಪಯೋಗ ಮಾಡಲಿಕ್ಕೆ ಸಾಧ್ಯ ಇದೆ. ಉಳಿದ ನೀರನ್ನು ಉಪಯೋಗ ಆಗಬೇಕಾದರೆ ಸುಮಾರು ೫೫೦ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕು, ಪರ್ಸೇ ಪರ್ಸೇ ೪೫ ಕೋಟಿ, ೫೦ ಕೋಟಿ ಅಥವಾ ಹೆಚ್ಚೆಂದರೆ ೬೦ ಕೋಟಿ ಖರ್ಚು ಮಾಡತಕ್ಕಂಥ ಪರಿಸ್ಥಿತಿಯನ್ನು ಇಲ್ಲಿ ನಿರ್ಮಾಣ ಮಾಡಿದರೆ ಪ್ರಯೋಜನವಾಗುವುದಿಲ್ಲ ಪ್ರತಿವರ್ಷ ೨೦೦-೩೦೦ ಕೋಟಿ ಖರ್ಚು ಮಾಡಿದರೆ ಮಾತ್ರ ೨ ಸಾವಿರದ ವರ್ಷಕ್ಕೆ ಇದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಖಂಡಿತ ವಾಗಿಯೂ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಹಂಚಿಕೆಗೆ ಏನು ನೀರು ಬಂದಿದೆ ಅದನ್ನು ಉಪಯೋಗ ಮಾಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ನಮ್ಮ ಕೇಂದ್ರದ ಯೋಜನಾ ಸಚಿವರಾದಂಥ ಶ್ರೀ ಶಿವಶಂಕರ್ ಅವರು ಒಂದು ಹೇಳಿಕೆಯನ್ನು ಹೈದರಾಬಾದ್‌ನಿಂದ ಕೊಟ್ಟರು. ಅದರ ಪ್ರಕಾರ ಅವರು ಏನು ಹೇಳಿದ್ದಾರೆ ಎಂದರೆ.--

> "He told newsmen here on Sunday that objection to the Telugu-Ganga projects were based on the award of the Tribunal and the issue had to be sorted out at political level by holding a sitting. The Centre wanted to play a conciliatory role. The Andhra Pradesh Chief Minister refused to attend the meeting, he said."

ಇದು ಪೊಲಿಟಿಕಲ್ ವಿೂಟಿಂಗ್‌ನಿಂದ ಆಗಬೇಕೆಂದು ಹೇಳಿ ಕೇಂದ್ರಸರ್ಕಾರದವರು ಕೂಡ ಮನಗಂಡಿದ್ದಾರೆ. ಏಕೆಂದರೆ ಇದು ಪಾರ್ಟ್ (ಬಿ) ಸ್ಕೀವ್ ಇದೆ, ಇವತ್ತೇ ಈ ನಿರ್ಣಯವನ್ನು ಮಾಡ ಬಹುದು ಆದರೆ ಆಂಧ್ರಪ್ರದೇಶದವರಿಗೆ ಗೊತ್ತಿದೆ. Under the 'B' scheme, Andhra Pradesh will get only 15%. ಇದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಮೂರೂ ರಾಜ್ಯಗಳು ಒಪ್ಪಬೇಕಾಗಿರುತ್ತದೆ. ಆಂಧ್ರಪ್ರದೇಶದವರು ಇದಕ್ಕೆ ಒಪ್ಪುವುದಿಲ್ಲ. ಏಕೆಂದರೆ they get a least in that share in the 'B' scheme and Karnataka is getting lion's share in that ಆದರೆ ಕೇಂದ್ರ ಪೊಲಿಟಿಕಲ್ ರೀಕನ್ಸಿಲಿಯೇಟರಿ ವಿೂಟಿಂಗ್‌ನಿಂದ ಇದು ಆಗಬೇಕು ಎಂದು ಹೇಳಿದಾಗ ಇವತ್ತು ನಾವು ಆ ಬಗ್ಗೆ ರಾಜಕೀಯವಾದಂಥ ಇಚ್ಛಾಶಕ್ತಿಯನ್ನು ತೋರಿ ಸುತ್ತಿಲ್ಲ. Whether Karnataka people lack this political will to fight, to put pressure and insist for their ligitimate share of water ? ಇದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಏಕೆಂದರೆ ಉಳಿದವರ ಮೇಲೆ ನಾವು ದೋಷಾರೋಪಣೆ ಮಾಡಿ ತಪ್ಪಿಸಿಕೊಳ್ಳತಕ್ಕಂಥ ಪ್ರಯತ್ನವನ್ನು ಬಹಳ ಸುಲಭವಾಗಿ ಮಾಡಬಹುದು.

ಆದರೆ ಇವತ್ತು ಏನು ಇಂಪ್ರೆಷನ್ ಬಂದಿದೆ ಎಂದು ಹೇಳಿದರೆ, when we talk about Telugu-Ganga Mr. N.T. Rama Rao's name is synonymous whether you like it or not. Politically you may like, but Andhra Pradesh may not like But his name has become synonymous as far as Telugu-Ganga is concerned. He is championing their cause, he is the leader as far as that issue is concerned and as far as Andhra Pradesh water is concerned. But, here who is championing to fight for the legitimate right of the water of Karnataka ? Today, Mr. Ramakrishna Hegde should have been the champion of this cause to safeguard the interest of Karnataka. But why his voice is very meek to say that it is the least. ತೆಲುಗು ಗಂಗಾ ಅಥವಾ ಕೃಷ್ಣಾ ನೀರಿನ ಹಂಚಿಕೆಯ ವಿಚಾರದಲ್ಲಿ ಇವತ್ತಿನವರೆಗೂ ಯಾವುದೇ ರೀತಿಯಾದ ಪ್ರತಿಭಟನೆ, ಅಥವಾ ನ್ಯಾಯವಾದ ಪ್ರತಿಭಟನೆ ಮಾಡುತ್ತಾ ಇರುವುದು ಕಾಣುತ್ತಿಲ್ಲ. This is why sometime ಇದನ್ನು ಸ್ಯಾಕ್ರಿಫೈಸ್

ಮಾಡುತ್ತಾ ಇದ್ದೀರೆಂದು ಇಲ್ಲಿ ಹೇಳಬೇಕಾಗುತ್ತದೆ. ಅನೇಕಬಾರಿ ಇದನ್ನು ಹೇಳಿದ್ದೇವೆ, ತಮ್ಮ ಮೌನ, ಕರ್ನಾಟಕಕ್ಕೆ ಮಾರಕವಾಗಬಹುದು ಎನ್ನತಕ್ಕಂಥ ಹಂತದಲ್ಲಿ, ನಾವು ವಿಚಾರ ಮಾಡ ಬೇಕಾಗಿದೆ. ನಮಗೆ ಈ ಯೋಜನೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದವರು, ಗೋದಾವರಿ ಡೈವರ್ಷನ್ ಮಾಡುವಂತೆ ಹೇಳಿದರು, ೨೯ ಟಿ.ಎಂ.ಸಿ.ಎಫ್.ಟಿ. ಮಾಡುತ್ತೇವೆಂದು ಹೇಳಿದವರು, ಇವತ್ತು ವಿರಾಟ್ ಸ್ವರೂಪದ ಒಂದು ಯೋಜನೆಯನ್ನು ಮಾಡಿ, ಕೇಂದ್ರಕ್ಕೆ ಒತ್ತಡದ ಮೇಲೆ ಒತ್ತಡ ತಾಂತ್ರಿಕ ವರದಿಯನ್ನೂ ಕೂಡ ತಮಗೆ ಅನುಕೂಲವಾಗಿ ಮಾಡುವಂತೆ ಇವತ್ತಿನ ಪರಿಸ್ಥಿತಿ ನಿರ್ಮಾಣ ವಾಗಬೇಕಾದರೆ. ಕರ್ನಾಟಕ. has failed to advocate its cause effectively ಎಂಬು ದನ್ನು ಯಾವತ್ತೂ ಒಪ್ಪಬೇಕಾದ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ನಾವು ಏನಾದರೂ ಹೇಳಿದರೆ. ರಾಜಕೀಯಕ್ಕೆ ಹೇಳುತ್ತಾರೆಂದು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳುತ್ತಾರೆ, ಕರ್ನಾಟಕ ಜಿಲ್ಲೆ ಎಂಬುದರ ಬಗ್ಗೆ ಬಹಳ ಚೆನ್ನಾಗಿ ಪುಸ್ತಕ ಪ್ರಿಂಟ್ ಮಾಡಿಸಿದ್ದೀರಿ. ಅದೇ ತೆಲುಗು ಗಂಗಾ ಯೋಜನೆ ಬಗ್ಗೆ ಕರ್ನಾಟಕದ ಕೇಸ್ ಏನು ಎಂಬುದನ್ನು ಇಂಗ್ಲಿಷ್‌ನಲ್ಲಿ ತಮಿಳಿನಲ್ಲಿ ಮತ್ತು ಎಲ್ಲಾ ಭಾಷೆಯಲ್ಲಿ ಪ್ರಿಂಟ್ ಮಾಡಿಸಿ ಹಂಚಿ. If you advance the case of Karnataka we would welcome such a measure.

SRI RAMAKRISHNA HEGD.E—It is being done.

SRI M. VEERAPPA MOILY.—It is being done now. I think that image building will come in conflict with other things Your image building is always subject to some other things. Your image should be built from Karnataka, not from top to the bottom Your image should be built from villages of Karnataka, from sufferi g lotof drought-affected people. ಬೆಂಗಳೂರು ಅಲ್ಲ, ಬೇರೆ ಯಾವುದೇ ಪಟ್ಟಣಗಳಲ್ಲಿ ಕಾ ತು ಅದನ್ನು ಬಿಲ್ಡಪ್ ಮಾಡುವುದಕ್ಕಾಗುವುದಿಲ್ಲ. ರೈತರ ಮನಸ್ಸಿನ ಸಿಂಹಾಸನದಲ್ಲಿ ತಮ್ಮ ಇಮೇಜನ್ನು ಬಿಲ್ಡಪ್ ಮಾಡಬೇಕು. The technical advice given by som of the. intellectuals of Delhi has gone fault in your image buildine processg You could have called a national debate at least at Delhi Karnatak. Bill ಮೇಲೆ ಡಿಬೇಟ್ ಮಾಡುತ್ತೇವೆ ಎಂದು ಹೇಳಿದ್ದೀರಿ. So many intellectualsa educationist, advocates and manv other people have welcomed this. measure. ವಿಶ್ವದಲ್ಲೇ ಈ ತರಹ ಬಿಲ್ ಮಾಡಿಲ್ಲ ಎಂದು ಹೇಳುತ್ತೀರಿ. In the entire world Karnataka is the first in, bringing this Kar nataka Legislature Privileges and Press Bills. What do the intellectuals say about it ? What do the technocrats of the irrigation sector say about the Telugu-Ganga project which is being cleared technically by the CWC ? On this you build up technical pressure, you build up political pressure build up pressure from intellectuals because. here the great tragedy is going to be fall Karnataka and drought affected people because of the clearance of the Telugu-Ganga project ಇದನ್ನು ಇವತ್ತು ನೀವು ಆಲೋಚನೆ ಮಾಡಬೇಕು. ಇದಕ್ಕೆ ಬೇಕಾದರೆ ಫ್ರೆಂಚ್ ಭಾಷೆಯಲ್ಲಿ ಪುಸ್ತಕ ಮಾಡಿಸಿ ಹಂಚಿ ಏ ಡೋಂಟ್ ಮೈಂಡ್. ಆದರೆ ಈ ಪುಸ್ತಕವನ್ನು ಬರೆಯಲು ಯಾರು ಸಿಗಲಿಲ್ಲವೇ ? ತೆಲುಗು ಗಂಗಾ ಬಗ್ಗೆ ಬರೆಯಲು ಡೆಲ್ಲಿಯಲ್ಲಿ ಯಾರೂ ಸಿಗಲಿಲ್ಲವೇ ? ಏಕೆ ಬರೆಯಲಿಲ್ಲ ? You spend one week and take holiday, sit down there and you write by yourselves. Let there be one indigenous book written by Mr. Rama-krishna Hegde at least on Telugu-Ganga. We welcome it.

ಇಷ್ಟಾದರೂ ನಡೆಯಲಿ ಇವತ್ತು ಆದುದರಿಂದ ಅಧ್ಯಕ್ಷರೇ, ಇವತ್ತು ತೆಲುಗು-ಗಂಗಾ ಯೋಜನೆಯ ಬಗ್ಗೆ ಒಂದು ಹೋರಾಟವನ್ನು ಮಾಡಿದೆ. ಸಿಂಹಘರ್ಜನೆಯನ್ನು ಮಾಡಿದೆ ಎಂದು

ಸನ್ಮಾನ್ಯ ದೇವೇಗೌಡರು ಹೇಳಿದರು. ಆದರೆ, that did not fit into the national politics of this matter. You have to get only when you push in the national context. Every welfare scheme and any interest of Karnataka if that has to be put into national context, national image building of Ramakrisha Hegde, he has to sacrifice it. But the people of Karnataka are not prepared to sacrifice it. ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾದರೆ ನಾವು ಇವತ್ತು ಇದನ್ನು ಅರ್ಥ ಮಾಡಿಕೊಳ್ಳಬೇಕು. ಈ ದೇಶದಲ್ಲಿ ಆಯಾ ಪ್ರದೇಶದ ಹಕ್ಕನ್ನು ಸಂರಕ್ಷಣೆ ಮಾಡಿಕೊಳ್ಳುವುದಕ್ಕೆ ಸ್ಟೇಟ್ಸ್ ರಿ-ಆರ್ಗನೈಸೇಷನ್ ಮಾಡಿದ್ದಾರೆ. ಆದುದರಿಂದ ಇವತ್ತು ರಾಷ್ಟ್ರದ ಯಾವುದೇ ವ್ಯಕ್ತಿ, ಯಾವುದೇ ಶಕ್ತಿ ತನ್ನ ಒಂದು ಸದ್ಭಡತೆಗಾಗಿ ಕರ್ನಾಟಕವನ್ನು ಬಡಕಲು ಮಾಡತಕ್ಕಂಥ ಯಾವ ಒಂದು ಪರಿಸ್ಥಿತಿಗೆ ಕರ್ನಾಟಕವನ್ನು ಒಯ್ದುಕೊಂಡು ಹೋಗುತ್ತಿದ್ದಾರೆ ಅದನ್ನು ರಿವರ್ಸ್ ಮಾಡಬೇಕು. You have to put pressure. I must say Karnataka Government has grossly defaulted as far as this Telugu-Ganga project is concerned. I don't know how you are going to repair it. ಆದುದರಿಂದ ಇಂತಹ ಒಂದು ಗಂಭೀರವಾದಂಥ ವಿಚಾರವನ್ನು ಇವತ್ತು ಸರಕಾರ ಗಂಭೀರವಾಗಿ ಪರಿಗಣನೆ ಮಾಡಬೇಕು. ನಮ್ಮ ನ್ಯಾಯವಾದ ಒಂದು ನೀರಿನ ಹಕ್ಕಿಗಾಗಿ ಹೋರಾಟ ಮಾಡಬೇಕು ಮಾತ್ರವಲ್ಲ, ಆ ನೀರನ್ನು ಉಪಯೋಗ ಮಾಡತಕ್ಕಂಥ ದೃಷ್ಟಿಯಲ್ಲಿ ಕೂಡಾ ತಾವು, ಈ ಸರಕಾರ ಗಮನಿಸಬೇಕಾಗಿದೆ. ಇಲ್ಲದಿದ್ದರೆ ಕರ್ನಾಟಕ ರಾಜ್ಯದ ರೈತರು ಬರಗಾಲ ಪೀಡಿತ ಜನತೆಗೆ ಎಂದಿಗೂ ನಿಮ್ಮನ್ನು ಕ್ಷಮಿಸುವುದಿಲ್ಲ. ಇದು ಕರ್ನಾಟಕ ರಾಜ್ಯದ ಒಂದು ಐತಿಹಾಸಿಕ ದುರಂತವಾದೀತು ಎಂಬ ವಿಚಾರವನ್ನು ಹೇಳಿ, ನನಗೆ ಈ ವಿಚಾರವನ್ನು ಎತ್ತಲಿಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಪಂದನೆಯನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು).— ಮಾನ್ಯ ಅಧ್ಯಕ್ಷರೇ, ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಮಾತನಾಡುವಾಗ, ನಿಜವಾಗಲೂ ಈ ಸರಕಾರವಾಗಲೀ, ಹೊದಲಿನ ಸರಕಾರವಾಗಲೀ ಇದರ ಬಗ್ಗೆ ನಿರ್ಲಜ್ಜತನದ ಸರಮಾವಧಿಯನ್ನು ತೋರಿಸಿದ್ದಾರೆ ಎಂದು ಹೇಳ ಬೇಕಾಗುತ್ತದೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದರೆ, ಈ ಯೋಜನೆಯ ಅಂದಾಜು ವೆಚ್ಚ ೧೯೬೩ ರಲ್ಲಿ ೫೮ ಕೋಟಿ ಇದ್ದದ್ದು, ೧೯೭೮ ರಲ್ಲಿ ೨೮೩ ಕೋಟಿ ಆಯಿತು. ೧೯೮೫ ರಲ್ಲಿ ೮೩೫ನೇ ಇಸವಿಯ ರೇಟ್ ಪ್ರಕಾರ ೧೦೫೧ ಕೋಟಿ ಆಯಿತು. ಈಗೇನಾದರೂ ರಿವೈಸ್ ಮಾಡಿದರೆ ಇದು ಎರಡು ಸಾವಿರ ಕೋಟಿ ರೂಪಾಯಿಗಳ ಮೇಲೆ ಹೋಗುತ್ತದೆ. ಮಾನ್ಯ ದೇವೇಗೌಡರು, ಈಗ ಕೊಡುವ ಗ್ಯಾರಂಟ್ಸ್ ಪ್ರಕಾರ ಹೋದರೆ, ಈ ಯೋಜನೆ ಕಂಪ್ಲೀಟ್ ಆಗಲು ಇನ್ನು ೭೦ ವರ್ಷ ವಾಗುತ್ತದೆ ಎಂದು ಈ ಸದನದಲ್ಲಿ ಸ್ಪಷ್ಟವಾಗಿ ಹೇಳಿದರು. ಕರ್ನಾಟಕ ರಾಜ್ಯದಲ್ಲಿ ನೀರಾವರಿಯ ಒಂದು ಟಾರ್ಜೆಟ್ ಇದ್ದದ್ದು ಎಷ್ಟು, ನಾವು ಮಾಡಿರುವುದು ಎಷ್ಟು ಎಂದರೆ, ೪.೨೫ ಲಕ್ಷ ಹೆಕ್ಟೇರ್ ನಾವು ಕಂಪ್ಲೀಟ್ ಮಾಡಬೇಕಾಗಿತ್ತು. ಆದರೆ ಇವತ್ತು ೧.೭೬ ಲಕ್ಷ ಹೆಕ್ಟೇರ್ಸ್ ಮಾತ್ರ ಕಂಪ್ಲೀಟ್ ಮಾಡಿರುತ್ತೇವೆ. ಅಲ್ಲಿಗೆ ಸುಮಾರು ಕಾಲು ಭಾಗದಷ್ಟು ಮಾತ್ರ ನೀರಾವರಿಗೆ ಒಳಪಡಿಸುವುದಕ್ಕೆ ಸಾಧ್ಯವಾಗಿದೆ. ಏನೋ ಉಚಿತವಾಗಿ ಭಿಟ್ಟುಬಿಟ್ಟಿದ್ದರೆ ಯೋಚನೆ ಇರಲಿಲ್ಲ. ಆದರೆ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿನ ನೀರನ್ನು ೧೯೯೦ರ ಒಳಗೆ ಕಂಪ್ಲೀಟ್ ಆಗಿ ಉಪಯೋಗ ಮಾಡಿಕೊಳ್ಳದಿದ್ದರೆ, ಈ ಅವಾರ್ಡ್ ಹೋಗುತ್ತದೆ. ಆಗ ಮಹಾರಾಷ್ಟ್ರದವರು, ಆಂಧ್ರದವರು ಫ್ರೀಯಾಗಿ ಇರುತ್ತಾರೆ, ಹಾಗೂ ತಮಗೆ ಇಷ್ಟಬಂದ ಹಾಗೆ ನೀರನ್ನು ಉಪಯೋಗ ಮಾಡಿಕೊಳ್ಳುವ ಪರಿಸ್ಥಿತಿ ಇದೆ. ಈ ಯೋಜನೆಯಲ್ಲಿ ನಾವು ಮೇಲುಗಡೆಯವರು, ಆಂಧ್ರದವರು ಕೆಳಗಡೆಯವರು. ನಾವು ಚಾವುಂಡೇಶ್ವರಿಗೆ ಹೇಳಿಬಿಟ್ಟು, ಕೃಷ್ಣವೇಣಿ ನೀನು ಆಂಧ್ರಕ್ಕೆ ಹರಿಯುವುದು ಬೇಡ ಎಂದು ಭೂಮಂತ್ರ ಹಾಕಿಸಿಬಿಡುವುದಕ್ಕೆ ಆಗುವುದಿಲ್ಲ. ನಾವು ಬೇಕಾದಷ್ಟು ಖರ್ಚು ಮಾಡಿ ಈ ನೀರನ್ನು ಉಪಯೋಗಿಸಿಕೊಳ್ಳದೇ ಇದ್ದರೆ, ಗುಲ್ಬರ್ಗಾ ರಾಯಚೂರು ಹಾಗೂ ಐದು ನದಿಗಳಿಂದ ಕೂಡಿರುವ ವಿಜಾಪುರ ಜಿಲ್ಲೆಯ ಪ್ರದೇಶಗಳಿಗೆ ಸರಿಯಾಗಿ ನೀರನ್ನು ಕೊಡದೇ ನಿರ್ಲಕ್ಷ್ಯ ತೋರಿಸಿಕೊಂಡಿದ್ದರೆ ಕರ್ನಾಟಕದ ಕಥೆ ಏನಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ನೀರಾವರಿ ಇಲ್ಲದೇ ಕರ್ನಾಟಕ ಅಭಿವೃದ್ಧಿಯಾಗುತ್ತದೆ ಎಂಬ ಹೇಳಿಕೆ ಒಪ್ಪತಕ್ಕ ವಾದ ಅಲ್ಲ.

ಆಂಧ್ರ ಪ್ರದೇಶದ ಅಭಿವೃದ್ಧಿ ಹೊಂದಿದೆ ಎಂದರೆ ಅಲ್ಲಿ ಅವರು ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದಾರೆಂದು ಅರ್ಥ. ಈ ನೀರಾವರಿ ಯೋಜನೆಗಳಿಗೆ ಕರ್ನಾಟಕ ರಾಜ್ಯದಲ್ಲಿ ಕೊಡುವ ಗ್ಯಾರಂಟಿಗೆ ಅನುಗುಣವಾಗಿ ಹೋದರೆ ಎಷ್ಟು ವರ್ಷಗಳಾದರೂ ಸಹ ಈ ಪ್ರಾಜೆಕ್ಟ್ ಪೂರ್ಣಗೊಳ್ಳುವುದಿಲ್ಲ. ನೀವು ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದುದು ೫೫೫ ಕೋಟಿ ರೂಪಾಯಿಗಳು ಇದರಲ್ಲಿ ಖರ್ಚು ಮಾಡಿರುವುದು ೪೪೪.೯೯ ಕೋಟಿ ರೂಪಾಯಿಗಳು. ಇದರಲ್ಲಿ ರಿಲೀಜ್ ಆಗಿರ ತಕ್ಕಂಥಾ ಹಣ ೪೯೯ ಕೋಟಿ ರೂಪಾಯಿಗಳು. ಈ ಬಗ್ಗೆ ಮಾನ್ಯ ದೇವೇಗೌಡರು ಒಂದು ಸಾರಿ ಹೇಳಿದ್ದರು ಈ ಯೋಜನೆಗಳಿಗೆ ಸರಿಯಾಗಿ ಹಣ ಒದಗಿಸಿಕೊಡದಿದ್ದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆಂದು, ಅದೇ ರೀತಿ ಹಣ ಒದಗಿಸಿ ಕೊಡದಿದ್ದುದರಿಂದ ಅವರು ರಾಜೀನಾಮೆ ಕೊಟ್ಟಿದ್ದು ಆಯಿತು. ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ೧೯೬೪ನೇ ಇಸವಿಯಲ್ಲಿ ಫೌಂಡೇಶನ್ ಹಾಕಿ ಹೋದರು. ಅವರಾದ ಮೇಲೆ ಸುಮಾರು ನಾಲ್ಕು ಜನ ಪ್ರಧಾನ ಮಂತ್ರಿಗಳು ಬಂದು ಹೋದರು. ಆದರೆ ಇಷ್ಟುವರೆವಿಗೂ ಆ ಅಪ್ಪರ್ ಕೃಷ್ಣಾ ಯೋಜನೆ ಪೂರ್ತಿಯಾಗಲಿಲ್ಲ, ಪೂರ್ತಿಯಾಗುವ ಸೂಚನೆ ಕೂಡ ನನಗೆ ಕಂಡು ಬಂದಿಲ್ಲ. ಈ ರೀತಿ ಹೀಗೆ ಕೊಟ್ಟರೆ ಇನ್ನು ೭೦ ವರ್ಷಗಳಾದರೂ ಸಹ ಈ ಪ್ರಾಜೆಕ್ಟ್ ಪೂರ್ತಿಯಾಗುವುದಿಲ್ಲ. ಬರಡು ಭೂಮಿಯಲ್ಲಿರತಕ್ಕಂಥ ಜನರಿಗೆ. ಹಿಂದುಳಿದ ಜನರಿಗೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಿಂದ ಬಹಳ ಅನುಕೂಲ ಇದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಹೆಚ್ಚು ಹಣ ಒದಗಿಸಿಕೊಡಬೇಕು. ಈ ಅಪ್ಪರ್ ಕೃಷ್ಣ ಯೋಜನೆ ಬಗ್ಗೆ ಎಕ್ಸ್‌ಪ್ರೆಸ್ ಕೀರಿಯರ್‌ನಲ್ಲಿ ಒಂದು ಮಾತು ಹೇಳಿದ್ದಾರೆ ಅದೇನೆಂದರೆ ಪ್ರಿಮೆಚುರ್ ಡೆತ್ ಆಫ್ ಯು. ಕೆ. ಪಿ. ಎಂದು ಹೇಳಿದ್ದಾರೆ. ಈ ಪ್ರಾಜೆಕ್ಟ್‌ನನ್ನು ಕೊಲುತ್ತಿದ್ದಾರೆಂದು ಅವರು ಹೇಳಿದ್ದಾರೆ. ನಾವು ಸುಮ್ಮನೆ ತೆಲಗಂ ಗಂಗಾ ವಿರುದ್ಧ ಹೋರಾಟ ಮಾಡಿದರೆ ಏನು ಪ್ರಯೋಜನ? ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳುವ ಶಕ್ತಿ ಬಂದರೆ ಆಗ ಈ ತೆಲುಗು ಗಂಗಾ ಯೋಜನೆ ಏನು ಮಾಡುತ್ತದೆ. ಅವರು ಮೊದಲು ಏನು ಹೇಳಿದರು ನಾವು ಪೆನ್ನಾರ್‌ನಲ್ಲಿ ೫೦ ಟಿ ಎಂ. ಸಿ. ಎಫ್. ಟಿ ನೀರನ್ನು ತೆಗೆದುಕೊಳ್ಳುತ್ತೇವೆ ಗೋದಾವರಿ ನದಿಯಿಂದ ೮೦ ಟಿ. ಎಂ. ಸಿ. ಎಫ್. ಟಿ. ನೀರನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದರು. ಈ ನೀರನ್ನು ತೆಗೆದುಕೊಂಡು ನಾವು ಈ ಪ್ರಾಜೆಕ್ಟ್ ಮಾಡುತ್ತೇವೆಂದು ಹೇಳುತ್ತಿದ್ದರು. ಆದರೆ ಈಗ ಆದೂ ಇಲ್ಲ. ನಾವು ಮೊದಲು ನಮ್ಮ ಭಾಗದ ನೀರನ್ನು ಉಪಯೋಗಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು. ಅದಕ್ಕೆ ಸರಿಯಾಗಿ ಹಣ ಸರ್ಕಾರ ಒದಗಿಸಿಕೊಡಬೇಕು. ಈ ಯೋಜನೆಗೆ ವರಲ್ಡ್ ಬ್ಯಾಂಕ್ ಧನ ಸಹಾಯ ಸಹ ಮಾಡುತ್ತದೆ. ಆದರೂ ಸಹ ಸಾಧ್ಯವಾಗುತ್ತಿಲ್ಲವೆಂದರೆ ಹೇಗೆ ? ಸ್ವಾಮಿ ನಾನು ಸಹ ಒಂದು ಸಾರಿ ಭೀಮರಾಯನಗುಡಿಗೆ ಹೋಗಿದ್ದೆ ಅಲ್ಲಿ ಬಹಳ ಹಣ ಸೋರಿ ಹೋಗುತ್ತಿದೆ. ಸಾವಿರಾರು ಒಂದು ೫೦ ಪರ್ಸೆಂಟಿನಷ್ಟು ಹಣ ಸೋರಿ ಹೋಗುತ್ತಿದೆ ಇಲ್ಲಿಗೆ ಹೊಂದಂತಹ ಇಂಜನೀಯರ್ಸ್‌ಗೆ ಕುವೈಟ್‌ಗೆ ಹೋದಂತೆ ಆಗುತ್ತದೆ. ಇಲ್ಲಿ ಲಾರಿ ಗಟ್ಟಲೆ ಸಿಮೆಂಟ್ ಸಿಗುತ್ತದೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಇಂತಹ ಒಂದು ಪ್ರಾಜೆಕ್ಟ್‌ಗೆ ಸರ್ಕಾರ ಇನ್ನು ಮುಂದಾದರೂ ಹಣ ಒದಗಿಸಿಕೊಟ್ಟು ಬೇಗ ಪ್ರಾಜೆಕ್ಟ್ ಪೂರ್ತಿಗೊಳಿಸಲಿ ಎಂದು ನಾನು ಹೇಳಿ ನನ್ನ ವಾತನ್ನು ಮುಗಿಸುತ್ತೇನೆ. ಬೇಗ ಮುಗಿಸದಿದ್ದರೆ ರೈತರಿಗೆ ಮೋಸ ಮಾಡಿದಂತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಸ್ವಾಮಿ ಒಂದು ಮನವಿ ಇದೆ. ಅದನ್ನು ತೆಗೆದುಕೊಳ್ಳೋಣ. ಇಲ್ಲಿ ಪಾಸಾದ ಮೇಲೆ ಮೇಲ್ಮನೆಗೆ ಸಹ ಹೋಗ ಬೇಕಾಗಿದೆ ಆ ಬಿಲ್.

ಅಧ್ಯಕ್ಷರು.—ಆಯಿತು.

† ಶ್ರೀ ಬಿ. ಜೆ. ಕೊಟ್ರಪ್ಪ (ಹರಿಹರ).—ಮಾನ್ಯ ಸಭಾಧ್ಯಕ್ಷರೆ, ಈ ಕೃಷ್ಣಾ ನದಿ ನೀರಿನ ಬಳಕೆ ಬಗ್ಗೆ ಕಾಂಗ್ರೆಸ್‌ನವರು ಇದರ ಬಗ್ಗೆ ದೊಡ್ಡ ಹೋರಾಟವನ್ನು ನಡೆಸಿದ್ದಾರೆ ಇದನ್ನು ಸಾಮಾನ್ಯವಾಗಿ ಪಕ್ಷದ ದೃಷ್ಟಿಯಿಂದ ನೋಡಬಾರದು ಇದನ್ನು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಆ ಒಂದು ಕಳಕಳಿಯಿಂದ, ನಾವೆಲ್ಲರೂ ಸದನದ ಮುಂದು ಪ್ರತಿಪಾದನೆ ಮಾಡುತ್ತಾ ಇದ್ದೇವೆ. ಬಚಾವತ್ ರಿಪೋರ್ಟ್‌ನಲ್ಲಿ ೮೦೦ ಟಿಎಂಸಿಎಫ್‌ಟಿ ನೀರನ್ನು ಆಂಧ್ರಪ್ರದೇಶದವರು ಬಳಸಬೇಕು, ೬೫೫ ಟಿಎಂಸಿಎಫ್‌ಟಿ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನೀರನ್ನು ಕರ್ನಾಟಕದವರು ಬಳಸಿಕೊಳ್ಳಬೇಕು, ಶೇ೦ ಟಿಎಂಸಿಎಫ್‌ಟಿ ನೀರನ್ನು ಮಹಾರಾಷ್ಟ್ರದವರು ಬಳಸಿಕೊಳ್ಳಬೇಕು ಎಂದು ಮಾಡಿದ್ದಾರೆ. ಈ ಬಳಕೆಯನ್ನು ೨೦೦೦ದನೇ ಇಸವಿಯೊಳಗಾಗಿ ಯಾವುದೇ ರಾಜ್ಯದವರು ಬಳಸದಿದ್ದರೆ, ಇನ್ನೊಂದು ರಾಜ್ಯದಲ್ಲಿ ಹೆಚ್ಚುವರಿ ನೀರನ್ನು ಬಳಸಿದ ಪಕ್ಷದಲ್ಲಿ ಈ ರಾಜ್ಯ ಎಂದರೆ ಯಾವ ರಾಜ್ಯ ನೀರನ್ನು ಬಳಸದೆ ಇರತಕ್ಕಂಥಾದ್ದು ಇದೆ ಅದು ತನ್ನ ಹಕ್ಕನ್ನು ಬಿಟ್ಟುಕೊಂಡಿದೆ ಎಂದು ಹೇಳಕೂಡದು, ಮತ್ತೆ ತನ್ನ ಹಕ್ಕನ್ನು ತಾನು ಮುಂದೆಯೂ ಉಳಿಸಿಕೊಳ್ಳುತ್ತದೆ ಎಂಬುದಾಗಿ ಬಚಾವತ್ ರಿಪೋರ್ಟ್‌ನಲ್ಲಿ ತಿಳಿಸಿರುತ್ತಾರೆ. ೨೦೦೦ನೆಯ ಇಸವಿಯಾದ ಮೇಲೆ ಹೆಚ್ಚುವರಿ ನೀರು ಸಿಕ್ಕ ಪಕ್ಷದಲ್ಲಿ ಒಂದು ಕಮಿಷನ್ ನೇಮಕ ಮಾಡಿ, ಹೆಚ್ಚುವರಿ ನೀರನ್ನ ೫೦ ಪರ್ಸೆಂಟ್ ಕರ್ನಾಟಕ ಬಳಸಬೇಕು, ೩೦ ಪರ್ಸೆಂಟ್‌ನ್ನು ಆಂಧ್ರಪ್ರದೇಶ ಬಳಸಬೇಕು, ೧೫ ಪರ್ಸೆಂಟ್ ಮಹಾರಾಷ್ಟ್ರದವರು ಬಳಸಬೇಕು ಎಂದು ತಿಳಿಸಿದ್ದಾರೆ. ಆದುದರಿಂದ ನಮ್ಮ ಕರ್ನಾಟಕ ರಾಜ್ಯದವರು ಈ ಬಗ್ಗೆ ಭಯ ಪಡಬೇಕಾಗಿಲ್ಲ. ತೆಲುಗುಗಂಗಾ ಆದುದರಿಂದ ನಮ್ಮ ನೀರು ಹೋಯಿತು ನಮ್ಮ ಹಕ್ಕು ಹೋಯಿತು ಎಂದು ಹೇಳುವುದು ಸರಿಯಲ್ಲ ಎಂದು ಕಾಣುತ್ತದೆ ಆದರೆ ಒಂದು ದೃಷ್ಟಿಯಲ್ಲಿ ನಮ್ಮ ಹಕ್ಕನ್ನು ನಾವು ಪ್ರತಿಪಾದನೆ ಮಾಡಿ ಜನತೆಯ ಹಿತಕ್ಕೋಸ್ಕರವಾಗಿ ನಮ್ಮ ಹಕ್ಕಿನ ನೀರನ್ನು ೨೦೦೦ರನೇ ಇಸವಿಯೊಳಗಾಗಿ ಬಳಸಬೇಕೆಂದು ನಮ್ಮೆಲ್ಲರ ಚಿಂತೆಯಾಗಿದೆ. ನಮಗೆ ರಸ್ತೆಗಳು ಇಲ್ಲದಿದ್ದರೂ ಆಡ್ಡಿಯಿಲ್ಲ, ಸ್ಕೂಲ್‌ಗಳು ಇಲ್ಲದಿದ್ದರೂ ಆಡ್ಡಿ ಇಲ್ಲ, ನಮಗೆ ಮುಖ್ಯವಾಗಿ ಅನ್ನ ಬೇಕಾಗಿದೆ. ಅದಕ್ಕೋಸ್ಕರವಾಗಿ ಈಸದನದಲ್ಲಿ ಒಕ್ಕೊರಲಿನಿಂದ ಕೂಗಿ, ೨೦೦೦ನೇ ಇಸವಿಯೊಳಗಾಗಿ ಆ ನೀರನ್ನು ನಾವು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕೆಂದು ಯೋಜನೆ ಮಾಡಿ, ಹೋದ ವರ್ಷ ೫೦೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಈ ಸದನದಲ್ಲಿಯೂ ಹೇಳಿದ್ದರೆ, ಪಕ್ಷದಲ್ಲಿಯೂ ಹೇಳಿದ್ದಾರೆ. ಆದರೆ ಯಾವ ಒಂದು ಕಾರಣಕ್ಕಾಗಿ ಆ ಮುನ್ನೂರು ಕೋಟಿಗಳನ್ನು ಕೊಡಲಿಲ್ಲ ಎಂದು ನಾವು ವಿಶ್ಲೇಷಣೆ ಮಾಡಬೇಕಾಗಿದೆ. ಆ ಒಂದು ಪರಿಸ್ಥಿತಿ ಇಲ್ಲ ಉದ್ಭವವಾಗಿದೆ- ಆಂಧ್ರಪ್ರದೇಶದಲ್ಲಿ ೫೦ ಪರ್ಸೆಂಟ್ ನೀರಾವರಿ ಇದೆ, ಕರ್ನಾಟಕದಲ್ಲಿ ೨೩ ಪರ್ಸೆಂಟ್ ನೀರಾವರಿ ಇದೆ. ಆಂಧ್ರಪ್ರದೇಶದಲ್ಲಿ ರಸ್ತೆಗಳು ಚೆನ್ನಾಗಿ ಇಲ್ಲ ಆದರೆ ಅವರು ನೀರಾವರಿ ಸೌಲಭ್ಯವನ್ನು ಚೆನ್ನಾಗಿ ಮಾಡಿಕೊಂಡಿದ್ದಾರೆ. ಇಂತಹ ನೀರಾವರಿ ಸೌಲಭ್ಯವನ್ನು ಸೂಕ್ತ ರೀತಿಯಲ್ಲಿ ಚೆನ್ನಾಗಿ ಮಾಡಿಕೊಡದಿದ್ದರೆ, ಈ ಮೂಲಕ ರೈತರಿಗೆ ಅನುಕೂಲವನ್ನು ಮಾಡಿಕೊಡದಿದ್ದರೆ. ನಾವು ಅವರಿಗೆ ಒಂದು ರೀತಿಯಲ್ಲಿ ಮೋಸ ಮಾಡಿದ ಹಾಗೆ ಆಗುತ್ತದೆ. ಒಂದು ಉದಾಹರಣೆಯನ್ನು ಈ ಕಡೆಯ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಿಂದೆ, ಕೊಯ್ನಾ ನೀರನ್ನು ಪಡೆಯತಕ್ಕಂಥ ಒಂದು ಹಕ್ಕು ಇತ್ತು, ಅಲ್ಲಿಂದ ವಿದ್ಯುತ್‌ನ್ನು ಪಡೆಯತಕ್ಕಂಥ ಒಂದು ಹಕ್ಕು ಬಂದಿತ್ತು, ಆದರೆ ಅದಕ್ಕಾಗಿ ೫೦ ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗಿತ್ತು, ಆದರೆ ಹಾಗೆ ಕೊಟ್ಟಿಲ್ಲದುದರಿಂದಾಗಿ ಇವೊತ್ತು ನಾವು ಆ ಪಕ್ಷನ್ನು ಕಳೆದುಕೊಂಡಿದ್ದೇವೆ. ಹಾಗೆ ಐದು ಕೋಟಿ ರೂಪಾಯಿಗಳನ್ನು ಅಂದು ಕೊಟ್ಟು ಹಕ್ಕನ್ನು ಉಳಿಸಿಕೊಂಡಿದ್ದರೆ ನಮ್ಮ ವಿಜಾಪುರ ಜಿಲ್ಲೆಗೆ ಇವೊತ್ತು ನೀರು ಮತ್ತು ವಿದ್ಯುಚ್ಛಕ್ತಿ ಬೇಕಾದಷ್ಟು ಸಿಗುತ್ತಾ ಇತ್ತು : ಆದರೆ ಇನ್ನೊಂದು ಸರಕಾರದವರು ಮಾಡಿದ ತಪ್ಪನ್ನು ನಾವು ಮಾಡಬೇಕು ಎಂದಲ್ಲ ಒಂದು ವೇಳೆ ಆ ಕಾಲದ ಸರಕಾರದವರು ಹಾಗೆ ಮಾಡಿದ್ದರೆ ನಮ್ಮ ರಾಜ್ಯದ ಅರ್ಧ ಭಾಗ ಇಂದು ನೀರಾವರಿಯುಕ್ತವಾಗಿರುತ್ತಿತ್ತು. ಕೇವಲ ಅಂದು ಐದು ಕೋಟಿ ರೂಪಾಯಿಗಳನ್ನು ಕೊಡದಿದ್ದ ಕಾರಣದಿಂದಾಗಿ ನಾವು ನಮ್ಮ ಹಕ್ಕನ್ನು ಕಳೆದುಕೊಂಡಿದ್ದೇವೆ. ನಮ್ಮ ರೈತರಿಗೆ ಈ ಮೂಲಕ ಅನ್ಯಾಯ ಮಾಡುವ ಒಂದು ಪ್ರಸಂಗ ಆಯಿತು. ಈಗಲಾದರೂ ಈ ಒಂದು ಪರಿಸ್ಥಿತಿಯು ನಮಗೆ ಬರಬಾರದು. ಅದಕ್ಕೋಸ್ಕರವಾಗಿ ಒಕ್ಕೊರಲಿನಿಂದ ಇದನ್ನು ೨೦೦೦ನೇಯ ಇಸವಿಯೊಳಗಾಗಿ ಮುಗಿಸಬೇಕೆಂದು ಎಲ್ಲರೂ ಒತ್ತಾಯ ಮಾಡಿ ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯ ಮತ್ತು ಕಳಕಳಿಯನ್ನು ವ್ಯಕ್ತ ಪಡಿಸಿದ್ದರು. ನಮಗಿರುವ ಹಕ್ಕನ್ನು ಪ್ರತಿಪಾದನೆ ಮಾಡುವ ವಿಚಾರದಲ್ಲಿ, ನಮಗಿರುವ ಸವಲತ್ತುಗಳನ್ನು ಬಳಸಿಕೊಳ್ಳುವ ವಿಚಾರದಲ್ಲಿ ಇತರ ವೆಚ್ಚವನ್ನು ಕಡಿಮೆ ಮಾಡಿಯಾದರೂ ನೀರಾವರಿಯನ್ನು ಮಾಡಿಕೊಳ್ಳುವ ಒಂದು ಕಳಕಳಿ ಇರಬೇಕು, ಇವೊತ್ತು ಅಪ್ಪರ್ ಭದ್ರಾದಿಂದ ೧೫ ಟಿಎಂಸಿಎಫ್‌ಟಿ ನೀರು ಇದೆ. ಅಪ್ಪರ್ ತುಂಗಭದ್ರಾ ಪ್ರಾಜೆಕ್ಟ್ ಆಗಿದೆ. ಆ ಭಾಗದಲ್ಲಿ ನೀರು ಉಪಯೋಗಿಸಿಕೊಳ್ಳುವುದಕ್ಕೆ ಚಾನಲ್ ಮಾಡಿ ಒಂದು ಗೋಡೆಯನ್ನು ಕಟ್ಟಿದರೆ ಸಾಕು. ನೀರು ಬಳಸುವುದಕ್ಕೆ ಸಾಧ್ಯವಾಗುತ್ತದೆ, ಆದರೆ ಅದನ್ನೂ ಸಹ ಚಿಂತನೆ ಮಾಡತಕ್ಕಂಥ ಒಂದು ಪರಿಸ್ಥಿತಿಯಲ್ಲಿ ನಾವು ಇಲ್ಲ ಆ ಪ್ರದೇಶದಲ್ಲಿ ಭೂಸ್ವಾಧೀನ ತೆಗೆದುಕೊಳ್ಳುವ ಕೆಲಸ ಇತ್ಯಾದಿಯಾಗಿ ಎಲ್ಲವೂ ಮುಗಿದಿದೆ. ಚಾನಲ್‌ಗೆ ಗೋಡೆ ಕಟ್ಟಿದ್ದರೆ ಸಾಕು, ಡ್ಯಾಮ್ ಕಟ್ಟಬೇಕಾಗಿಲ್ಲ ಆದರೆ ಆ ಕೆಲಸವನ್ನು ಮಾಡುವುದಕ್ಕೆ ನಾವು ಅಷ್ಟಾಗಿ ಮನಸ್ಸು ಮಾಡುತ್ತಾ ಇಲ್ಲ

ನೀರಾವರಿ ಯೋಜನೆ ಬಗ್ಗೆ ಚಿಂತನೆ ಮಾಡತಕ್ಕಂತಹ ಸರಕಾರ ನಮ್ಮದು. ಆದರೆ ಹಣಕಾಸಿನ ತೊಂದರೆ ಇದೆ ಎಂದು ಹೇಳತಕ್ಕಂತಹ ಪರಿಪಾಠವಿದ್ದರೂ ಕೂಡ ಸಾಲ ಸೋಲವೋ ಮಾಡಿ ಇದನ್ನು ಮುಂಗಿಸಲೇಬೇಕೆನ್ನುವ ಕರ್ತವ್ಯವನ್ನು ಅದು ಬಿಟ್ಟುಕೊಂಡಿದಿದೆ. ಒಕ್ಕೂರಲಿನ ಮಾತಿಗೆ ಮನ್ನಣೆ ಕೊಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ನಿಜವಾಗಿ ಅವರಿಗೆ ಇದರ ಬಗ್ಗೆ ಕಳಕಳಿ ಇದೆ ಅದುದರಿಂದಾಗಿ ಭರವಸೆ ಕೊಟ್ಟಿದ್ದಾರೆ ಹಣಕಾಸಿನ ಸಮಸ್ಯೆಟ್ಟಿದ್ದರೂ ಕೂಡ ಏನಾದರೂ ಪ್ರಯತ್ನ ಮಾಡಿ ಹಣವನ್ನು ಅದಕ್ಕೆ ಒದಗಿಸುವಂತಹ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ. ಅವರು ಬಹಳ ಜಾಣರಾಗಿದ್ದಾರೆ ದುಡ್ಡಿನ ಮೂಲಗಳನ್ನ ಹುಡುಕತಕ್ಕಂತಹ ಚಾಕಚಕ್ಯತೆ ಅವರಿಗೆ ಇದೆ ವಿಶ್ವಬ್ಯಾಂಕ್‌ನಿಂದ ೬೦೦ ಕೋಟಿ ರೂಪಾಯಿ ಸೆಪ್ಟೆಂಬರ್ ತಿಂಗಳಲ್ಲಿ ಕೊಡುತ್ತೇವೆಂದು ಹೇಳಿದ್ದಾರೆಂದು ನನಗೆ ತಿಳಿದು ಬಂದಿದೆ. ಈಗ ಇಟ್ಟಿರುವ ೩೦೦ ಕೋಟಿಯನ್ನು ಹಾಕಿದರೆ ನೀರಾವರಿ ಯೋಜನೆಗೆ ಬಹಳ ಅನುಕೂಲವಾಗುತ್ತದೆ ಮಾನ್ಯ ಮುಖ್ಯ ಮಂತ್ರಿಗಳು ಸದನದ ಒಕ್ಕೂರಲಿಗೆ ಮನ್ನಣೆ ಕೊಡುತ್ತಾರೆಂದು ಅವರಿಗೆ ಅಂತಹ ಚಾಕಚಕ್ಯತೆಯಿದೆಯೆಂದು ಹೇಳುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಬುರೆಡ್ಡಿ ವಿ ತುಂಗಳ್ (ಬಾಗಲಕೋಟೆ).—ಇವತ್ತು ಅಧಿವೇಶನದ ಕೊನೆಯದಿನ ಇವತ್ತು ಬಹಳ ಗಂಭೀರವಾದಂತಹ ಮತ್ತು ಇಡೀ ಉತ್ತರ ಕನ್ನಡ ಜಿಲ್ಲೆಗಳ ಜೀವಿತವಾಗಿರತಕ್ಕಂತಹ ತೆಲುಗು ಗಂಗಾ ಯೋಜನೆ ಬಗ್ಗೆ ವಿಷಯ ಚರ್ಚೆಗೆ ಬಂದಿದೆ. ಅನು ಸ್ವಾಗತಾರ್ಹ. ಯಾವ ಸದಸ್ಯರೇ ಈ ಪ್ರಶ್ನೆಯನ್ನು ಎತ್ತಿರಬಹುದಂ ಯಾವ ಸದಸ್ಯರೇ ವಿಷಯವನ್ನು ಒದಗಿಸಿರಬಹುದು ಈ ವಿಷಯದಲ್ಲಿ ಪಕ್ಷಭೇದ ಇರಲಾರದು ಈ ವಿಷಯದಲ್ಲಿ ನಮ್ಮ ನಾಯಕರಿಗೆ ಎಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಪರಮೋಚ್ಚ ಅಧಿಕಾರವನ್ನು ಈ ಸದನ ಕೊಟ್ಟಿದೆ. ಮಾನ ವೊಯಿಲಿಯವರು ಹೇಳಿರಬಹುದು, ಮಾನ್ಯ ವೆಂಕಟರಾಮಯ್ಯನವರು ವಿಷಯವನ್ನು ಪ್ರಸ್ತಾಪ ಮಾಡಿರಬಹುದು, ಮಾನ್ಯ ಕೊಟ್ರುಪ್ಪ ನವರು ಹೇಳಿರಬಹುದು. ಆದರೆ ವಿಷಯ ಮಾತ್ರ ಬಹಳ ಗಂಭೀರವಾದುದು. ಈ ಸದನದ ಮುಖಾಂತರ ರೈತರ ಚಿಂತನೆ ಮಾಡತಕ್ಕಂತಹ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಯಾವಾಗ ಇದಕ್ಕೆ ಅಡಿಗಲ್ಲನ್ನು ಇಟ್ಟರು ಅಂದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಅಡಿಗಲ್ಲನ್ನು ಇಟ್ಟರು,ಆಗ ನಾನು ಗೋಪಾಲಗೌಡರ ನಾಯಕತ್ವದಲ್ಲಿ ಕೆಲಸ ಮಾಡುತ್ತಿದ್ದು ನನಗೆ ೨೬ ವರ್ಷವಾಗಿತ್ತು. ಈಗ ನನಗೆ ಮಾರ್ಚ್ ೧೫ಕ್ಕೆ ೫೦ ವರ್ಷ ವಯಸ್ಸಾಯಿತು. ಇದನ್ನು ನೋಡಿದಾಗ ನನಗನ್ನಿಸುತ್ತದೆ. ಈ ರೀತಿಯಾವರೆ ಇದು ಯಾವಾಗ ಮುಗಿಯಂತ್ತದೆ, ಇದರಿಂದ ನಮ್ಮ ರೈತರಿಗೆ ಯಾವಾಗ ಅನುಕೂಲವಾಗುತ್ತದೆ ಎಂದು. ಕೃಷ್ಣಾ ಮೇಲ್ದಂಡೆ ಯೋಜನೆಯಾಗುತ್ತವೆ. ರಾಯಚೂರು, ಗುಲ್ಬರ್ಗಾ ಜಿಲ್ಲೆಗಳ ಜನರಿಗೆ ನೀರು ಸಿಗುತ್ತದೆ ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಕೃಷ್ಣಾ ನದಿ ನೀರು ನಮಗೆ ಸಂಪೂರ್ಣವಾಗಿ ಉಪಯೋಗವಾಗುತ್ತದೆಂದು ಏನು ಕನಸು ಕಂಡಿದ್ದೇವೆ. ಆ ಕನಸು ಇನ್ನೂ ಕನಸಾಗಿಯೇ ಇದೆ. ನಮ್ಮ ರೈತಾಪಿ ಜನರ ಪರಿಸ್ಥಿತಿ ಏನಾಗುತ್ತದೆ ಎಂಬ ಭಯ ಆತಂಕ ನನಗೆ ಇದೆ. ಅದಕ್ಕೆ ಕಾರಣವೇನೆಂದರೆ ನನ್ನ ೨೬ನೇ ವಯಸ್ಸಿನಲ್ಲಿ ಅಲಮಟ್ಟಿಗೆ ಲಾಲ್ ಬಹದ್ದೂರ್ ಶಾಸ್ತ್ರಿಯವರು ಬಂದು ಅಡಿಗಲ್ಲನ್ನು ಇಟ್ಟಿದ್ದನ್ನು ನಾನು ನೋಡಿದ್ದೇನೆ ಈ ಯೋಜನೆ ಪೂರ್ಣವಾಗುವುದನ್ನು ನಾನು ನೋಡುವುದಿಲ್ಲವೆಂದು ನನಗನ್ನಿಸುತ್ತದೆ. ಒಟ್ಟು ಈ ಯೋಜನೆ ಮುಗಿಯಬೇಕಾದರೆ ಎರಡು ಸಾವಿರ ಕೋಟಿ ರೂಪಾಯಿಗಳು ಬೇಕು ಅಷ್ಟು ಹಣವನ್ನು ಖರ್ಚು ಮಾಡಬೇಕಾದರೆ ನಮಗೆ ಕಷ್ಟವಾಗುತ್ತದೆ ಮಾನ್ಯ ಕೊಟ್ರುಪ್ಪನವರು ಇನ್ನಿತರ ನಾಯಕರು ಹೇಳಿದ ಹಾಗೆ ನಾವು ಹಣದ ಮೂಲಗಳನ್ನು ಹುಡುಕಬೇಕಾಗುತ್ತದೆ. ಬಚಾವತ್ ಕಮಿಷನ್‌ನಲ್ಲಿ ನೀರು ವಿಂಗಡಣೆಯ ಬಗ್ಗೆ ಇದೆ. ಕೃಷ್ಣಾ ನದಿಯ ನೀರು ಆಂಧ್ರ ಪ್ರದೇಶಕ್ಕೆ ಎಷ್ಟು ಹೋಗಬೇಕು, ಕರ್ನಾಟಕಕ್ಕೆ ಎಷ್ಟು ಹೋಗಬೇಕು, ಮಹಾರಾಷ್ಟ್ರದವರಿಗೆ ಎಷ್ಟು ಪಾಲು ಬರಬೇಕು ಎಂದು ಅವರೇ ವಿಂಗಡಣೆ ಮಾಡಿದ್ದಾರೆ. ಬಚಾವತ್ ಕಮಿಷನ್ ಶಿಫಾರಸ್ಸಿನಂತೆ ೨ ಸಾವಿರ ಇಸವಿಯೊಳಗೆ ಇದನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಉಪಯೋಗ ಮಾಡಿಕೊಳ್ಳದಿದ್ದರೆ ಆದಕ್ಕೆ ಯಾರೂ ಜವಾಬ್ದಾರರಲ್ಲ ನಮಗೆ ಆ ನೀರಿನ ಹಕ್ಕು ಉಳಿಯಲಿಕ್ಕಿಲ್ಲ. ಈ ಸದನದ ಮುಂಖಾಂತರ ತಮಗೆ ಅಪರಿಮಿತವಾದಂತಹ ಅಧಿಕಾರವನ್ನು ನೀಡಿದ್ದೇವೆ. ಬಡ್ಜೆಟ್ ಭಾಷಣದಲ್ಲಿ ಕೂಡ ಈ ಯೋಜನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಕಳೆದ ಸಲ ಇದೇ ಸದನದಲ್ಲಿ ಮಾನ್ಯ ಕಡಪಟ್ಟಿಯವರು ಒಂದು ಸೂಚನೆಯನ್ನು ಮಂಡಿಸಿದ್ದರು ಅದನ್ನು ಮಾನ್ಯ ಖರ್ಗೆಯವರು ಅನುಮೋದಿಸಿದ್ದರು. ಈ ರೀತಿ ಏತಕ್ಕೆ ಎಂದು ಹೇಳಿದರೆ ಅಪ್ಪರ್ ಕೃಷ್ಣ ಯೋಜನೆಯನ್ನು ಮುಗಿಸುವ ವಿಚಾರದಲ್ಲಿ ಈ

ಸದನದಲ್ಲಿ ಯಾವುದೇ ವಾದ ವಿವಾದಕ್ಕೂ ಆಸ್ಪದ ಇಲ್ಲ. ನಮ್ಮ ಸಭಾನಾಯಕರಿಗೆ ನಮ್ಮ ಮುಖ್ಯ ಮಂತ್ರಿಗಳಿಗೆ ಪರಮೋಚ್ಚವಾದ ಅಧಿಕಾರವನ್ನು ಕೊಟ್ಟಿದ್ದೇವೆ. ಹೋದ ವರ್ಷ ಅಪ್ಪರ್ ಕೃಷ್ಣ ಮೇಲ್ದಂಡೆ ಯೋಜನೆಗೆ ಖರ್ಚು ಮಾಡಿದ್ದು ೨೨ ಕೋಟಿ ರೂಪಾಯಿ. ಈ ವರ್ಷ ಆಗಿದ್ದು ೪೨ ಕೋಟಿ ರೂಪಾಯಿ. ಈಗಾಗಲೇ ೧೯೮೬ನೇ ಇಸವಿಯಲ್ಲಿದ್ದೇವೆ. ನಾವು ಈ ರೀತಿ ಖರ್ಚು ಮಾಡುತ್ತಾ ಹೋದರೆ ಎಂದಿಗೆ ಈ ಕೃಷ್ಣ ನದಿಯ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಂತ್ತದೆ? ತೆಲುಗುದೇಶಂನವರಿಗೆ ಯಾವುದೇ ಅಡೆತಡೆಗಳು ಬಂದರೂ ಕೂಡ, ಕೇಂದ್ರ ಸರ್ಕಾರದಲ್ಲಿ ದಿಗ್ಬಂದನೆಯನ್ನು ಏರಿದರೂ ಕೂಡಾ ವಿದ್ಯುತ್‌ವೇಗದಲ್ಲಿ ಪೂರ್ಣ ಮಾಡಲಿಕ್ಕೆ ಹೊರಟಿದ್ದಾರೆ. ತೆಲುಗುದೇಶಂನವರ ಈ ಪಠ್ಯಗಳ ಅದರ ನೂರು ಪಟ್ಟು ಹೆಚ್ಚು ಪಠ್ಯಗಳ ನಮಗೆ ಬೇಕು. ಆ ಪಠ್ಯಗಳನ್ನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇದೆ ಎಂದು ನಾನು ಭಾವಿಸಿದ್ದೇನೆ. ಮತ್ತು ತಮ್ಮ ಮುಖಾಂತರ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ಅನೇಕ ಸಲ ಇವರು ಈ ಮಾತನ್ನು ಶಾಸನ ಸಭೆಗಳಲ್ಲಿ ಹೇಳಿದ್ದಾರೆ, ವಿಧಾನ ಸಭೆಯಲ್ಲಿ ಹೇಳಿದ್ದಾರೆ, ಬಹಿರಂಗ ಸಭೆಗಳಲ್ಲಿ ಹೇಳಿದ್ದಾರೆ, ನಾನು ಕೃಷ್ಣ ಮೇಲ್ದಂಡೆ ಯೋಜನೆಗೆ ಹಣವನ್ನು ಖರ್ಚು ಮಾಡುವುದಾದರೆ ನೀವು ಯಾವುದೇ ಶಾಸಕರು ಶಾಲೆಯನ್ನು ಕೇಳ ಕೂಡದು, ಆಸ್ಪತ್ರೆಯನ್ನು ಕೇಳಕೂಡದು ಪಂಚಾಯತಿ ಕಟ್ಟಡವನ್ನು ಕೇಳಕೂಡದು ಮತ್ತು ಬೇರೆ ಕಟ್ಟಡಗಳನ್ನು ಕೇಳಕೂಡದು ಎಂದು. ಈ ರೀತಿ ಸರ್ವಾಧಿಕಾರವನ್ನು ಕೊಟ್ಟರೆ ಪರಮಾವಧಿ ಪ್ರಮಾಣದಲ್ಲಿ ದುಡ್ಡನ್ನು ಖರ್ಚುಮಾಡಿ ನಿಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸುತ್ತೇನೆ ಎಂದು ವೇದಿಕೆಗಳ ಮುಖಾಂತರ ಹೇಳಿದ್ದಾರೆ. ಅವರಿಗೆ ಈ ಮಾತನ್ನು ಹೇಳುತ್ತೇನೆ. ನಿಮಗೆ ಈ ಸದನ ಸರ್ವೋಚ್ಚವಾದಂಥ ಅಧಿಕಾರವನ್ನು ಕೊಟ್ಟಿದೆ, ಸ್ವಾತಂತ್ರ್ಯ ಸಿಕ್ಕಿದ ನಂತರವೂ ನಿರ್ಲಕ್ಷಿಸಲ್ಪಟ್ಟ ನಮ್ಮ ಜಿಲ್ಲೆಗಳಲ್ಲಿ ಅತ್ಯಂತ ಹಿಂದುಳಿದವರು, ಯಾವ ರೀತಿ ನಮಗೆ ಒಂದು ಹಣೆಪಟ್ಟಿಯನ್ನು ಕಟ್ಟಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಚರ್ಚೆಗೆ ಅತ್ಯಂತ ಸಿರಿವಂತಿಕೆಯನ್ನು ಒದಗಿಸಿದಂಥ ನಮ್ಮ ಪೊಲಿಟಿಲಿಯನ್‌ವರನ್ನು ಯಾವ ಪಕ್ಷ ಭೇದ ಇಲ್ಲದೆ ಅವರನ್ನು ಅಭಿನಂದಿಸುತ್ತೇನೆ. ಅನೇಕ ವಿಷಯಂಗಳನ್ನು ಅವರು ಚರ್ಚೆಗೆ ಒದಗಿಸಿದ್ದಾರೆ. ಇದರಲ್ಲಿ ಎಲ್ಲಾ ತರಹದ ಫಲಿತಾಂಶಗಳನ್ನು ಕಂಡುಕೊಂಡು ಈ ಕಾರ್ಯ ಮಾಡಲು ಮುಂದಾಗಬೇಕು. ಸಲವತ್ತು ವರ್ಷಗಳಿಂದ ನಮಗೆ ಏನೊಂದು ಹಣೆಪಟ್ಟಿಯನ್ನು ಕಟ್ಟಿದ್ದಾರೆ ಕರ್ನಾಟಕದಲ್ಲಿ, ಬೆಂಗಳೂರ್‌ಗೆ ಬಂದರೆ, ಮೈಸೂರಿಗೆ ಬಂದರೆ, ಮಂಡ್ಯಕ್ಕೆ ಬಂದರೆ ಎಲ್ಲಿಗೆ ಹೋದರೂ ಬಾಬುರೆಡ್ಡಿ ಬಂದ,ಬರಗಾಲದವ ಬಂದ ಎಂದು ಹಣೆಪಟ್ಟಿಯನ್ನುಕಟ್ಟಿದ್ದಾರೆ. ನಾಲ್ಕು ದಶಕಗಳಿಂದ ಬರಗಾಲದ ಜಿಲ್ಲೆ ಎಂದು ಒಂದು ಹಣೆಪಟ್ಟಿಯನ್ನು ನಮಗೆ ಕಟ್ಟಲಾಗಿದೆ. ಈ ಹಣೆಪಟ್ಟಿಯನ್ನು ಮುಚ್ಚುವಂಥ ಪ್ರಯತ್ನವನ್ನು ತಾವು ಮಾಡಬೇಕು. ನಮ್ಮನ್ನು ಬರಗಾಲದ ಜಿಲ್ಲೆಯವರು ಎಂದು ಏನು ಹೇಳುತ್ತಾರೆ, ಕರ್ನಾಟಕದ ಯಾವ ಮೂಲೆಗೆ ಹೋದರೂ ಕರಡ ನಮ್ಮನ್ನು ತಿರಸ್ಕಾರ ಮಾಡುತ್ತಾರೆ ಈ ತಿರಸ್ಕಾರದಿಂದ ಈ ಪಕ್ಕಂಗ ನುಡಿಗಳಿಂದ ನಮ್ಮನ್ನು ವಿಮೋಚನೆ ಮಾಡಬೇಕು ಇದಕ್ಕೆ ಅಂದರೆ ಈ ಯೋಜನೆಗಳಿಗೆ ಎಷ್ಟು ದುಡ್ಡು ಖರ್ಚಾದರೂ ಚಿಂತೆಯಿಲ್ಲ ವಿಶ್ವ ಬ್ಯಾಂಕ್‌ನಿಂದ ಸಾಲ ತಂದರೂ ಚಿಂತೆಯಿಲ್ಲ ಯಾವುದೇ ಬ್ಯಾಂಕ್‌ನಿಂದ ಸಾಲ ತಂದರೂ ಚಿಂತೆಯಿಲ್ಲ. ಈ ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರ್ಣ ಮಾಡಬೇಕು. ತೆಲುಗು ಗಂಗಾಯೋಜನೆಯನ್ನು ಮಾಡಲಿಕ್ಕೆ ಎಷ್ಟು ವೇಗದಲ್ಲಿ ಹೊರಟಿದ್ದಾರೋ ಅದಕ್ಕಿಂತ ಹತ್ತು ಪಟ್ಟು ವೇಗದಲ್ಲಿ ಕೆಲಸ ಮಾಡುವಂತಾಗಬೇಕು. ಮತ್ತೆ ಬೆಳಗಾಂ, ಬೀದರ್, ರಾಯಚೂರ್, ಗುಲ್ಬರ್ಗ, ಎಲ್ಲಿಗೆ ಹೋಗಲಿ ಆಗ ಭವಿಷ್ಯದಲ್ಲಿ ಜನ ನಿಮ್ಮನ್ನು ಪೊಗಳುತ್ತಾರೆ. ಇಲ್ಲದೇ ಹೋದರೆ ಶಾಪಕ್ಕೆ ಗುರಿಯಾಗಿ ಬೀಳಬೇಕಾದಂಥ ಪರಿಸ್ಥಿತಿ ಬರುತ್ತದೆ. ಈ ಕಾರಣಕ್ಕಾಗಿ ಈ ಸದನದ ಮುಖಾಂತರ ಎಷ್ಟೇ ದುಡ್ಡು ಖರ್ಚಾದರೂ ಅಡ್ಡಿ ಇಲ್ಲ, ಈ ಸದನ ಒಪ್ಪಿಗೆಯನ್ನು ಕೊಡುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಕೆಲಸವನ್ನು ಯುದ್ಧವೇಗದಿಂದ ಕೆಲಸ ಮಾಡಬೇಕು. ಇದನ್ನು ನಿರ್ವಿಕಾರದಿಂದ ಈ ಕೆಲಸವನ್ನು ಮಾಡಬೇಕು. ಉತ್ತರ ಕರ್ನಾಟಕದ ಬರಗಾಲ ಜಿಲ್ಲೆಗಳ ಭಾಗ್ಯದ ಬಾಗಿಲನ್ನು ತೆರೆಯುವಲ್ಲಿ ಅವರು ಈ ಕೆಲಸವನ್ನು ಅವಶ್ಯವಾಗಿ ಮಾಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಬಂದು ದೃಷ್ಟಿಯಿಂದ ಈ ವಿಷಯವನ್ನು ಎತ್ತಿದ್ದಕ್ಕೆ, ಎತ್ತಿದಂಥಹ ಎಲ್ಲಾ ಮಾನ್ಯ ಸದಸ್ಯರನ್ನು ನಾನು ವಂದಿಸುತ್ತೇನೆ. ಈ

ಸಂದರ್ಭದಲ್ಲಿ ಈ ವಿಷಯದ ಮೇಲೆ ಸಂಕ್ಷಿಪ್ತವಾಗಿ ಆದರೂ ಚರ್ಚೆ ಆಗ ಮಾಡತಕ್ಕದ್ದರ ಬಗತ್ಯ ಇತ್ತು. ಚರ್ಚೆಗೆ ಕೇಂದ್ರ ಸರ್ಕಾರಕ್ಕೆ ಆಗಲಿ ಅಥವಾ ನಮ್ಮ ರಾಜ್ಯ ಸರ್ಕಾರಕ್ಕೆ ಆಗಲಿ ಕೃಷ್ಣಾ ಜಲಾಯನ ಪ್ರದೇಶದ ನೀರಾವರಿ ಅಭಿವೃದ್ಧಿ ಬಗ್ಗೆ ನಮ್ಮ ಅವಶ್ಯಕತೆ ಮತ್ತು ನಾವು ಕೈಗೊಳ್ಳಬೇಕಾದಂತಹ ಕೆಲಸ ಇವುಗಳ ಬಗ್ಗೆ ನೆನಪು ಮಾಡಿಕೊಡುವುದು ಅಷ್ಟೇ ಅಲ್ಲ, ಈ ಚರ್ಚೆ ಅವಶ್ಯವಾಗಿಯೇ ಆಗಬೇಕು ಎಂದರೆ ಕೆಲವೇ ವಾರಗಳ ಹಿಂದೆ ಕೇಂದ್ರದ ವಾರ್ಟರ್ ಮತ್ತು ಪವರ್ ಕಮೀಷನ್ ನವರು ತೆಲುಗು ಗಂಗಾ ಪ್ರಾಜೆಕ್ಟ್ ಬಗ್ಗೆ ಒಂದು ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದರೆಂದು ಹೇಳತಕ್ಕ ಸುದ್ದಿ ಬಂದಿದ್ದರಿಂದ- ಈ ಟೆಕ್ನಿಕಲ್ ಕ್ಲಿಯರೆನ್ಸ್ ಕೇವಲ ಎನ್ವಿರಾನ್‌ಮೆಂಟ್ ಕ್ಲಿಯರೆನ್ಸ್ ಎಂದು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ತೆಲುಗು ಗಂಗಾ ಮೂಲಕ ಯಾವ ರೀತಿಯಲ್ಲಿ ಪಂಜೂರು ಆಯಿತು ಮತ್ತು ಯಾವ ಶರತ್ತಿಗೆ ಒಳಪಟ್ಟು ಮಂಜೂರು ಆಯಿತು ಎಂದು ಪುನಃ ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಆ ಶರತ್ತುಗಳನ್ನು ಆಂಧ್ರ ಸರ್ಕಾರವು ಮುರಿದಿದೆ. ಆ ಶರತ್ತುಗಳು ಯಾವುವು ಎಂದರೆ.

i) The lined channel between Srisailam and Somasila from the point of off take to be agreed upon by Andhra Pradesh and Tamil Nadu shall not be utilised for irrigation or other consumptive purposes.

ii) The Central Government will make arrangements to inspect the system during operational stages and ensure that the withdrawal of water into this water supply system from Srisailam does not exceed 15 TMCT in a water year and that the system is utilised only for Water Supply to Madras City and for no other purpose.

ಆ ಷರತ್ತು ಇದೆ. ಇದರಿಂದ ಸ್ಪಷ್ಟ ಆಗಿದೆ, ಇದರಲ್ಲಿ ಯಾವುದೇ ರೀತಿಯ ಅಸ್ಪಷ್ಟತೆಗೆ ಅವಕಾಶ ಇಲ್ಲ, ಯಾವುದೇ ರೀತಿಯ ಶಂಕೆಗೆ ಅವಕಾಶ ಇಲ್ಲ. ಆದರೆ ಆಂಧ್ರ ಪ್ರದೇಶದ ಮಾನ್ಯ ಮುಖ್ಯ ಮಂತ್ರಿಗಳು ತೆಲುಗು ಗಂಗಾ ಪ್ರಾಜೆಕ್ಟ್ ಮುಖ್ಯವಾದಂತಹ ಉದ್ದೇಶ ಕುಡಿಯುವ ನೀರಿನ ಅಭಾವ ಇದ್ದ ಮದ್ರಾಸ್ ನಗರಕ್ಕೆ ಕುಡಿಯುವ ನೀರಿನ ಸಪ್ಲೈ ಮಾಡತಕ್ಕದ್ದು ಇದ್ದುದನ್ನು ಹಾಗೆಯೇ ಅದನ್ನು ವಿಸ್ತೃತಗೊಳಿಸಿ ಆಂಧ್ರ ಪ್ರದೇಶದ ನಾಲ್ಕು ಜಿಲ್ಲೆಗಳಿಗೆ ನೀರನ್ನು ಒದಗಿಸತಕ್ಕ ರೀತಿಯಲ್ಲಿ ಮಾರ್ಪಾಟನ್ನು ಅವರೇ ಮಾಡಿದ್ದಾರೆ. ಅದಕ್ಕೆ ಬೇರೆ ಯಾವುದೇ ರಾಜ್ಯದ ಅಂದರೆ ರಾಜ್ಯ ಸರ್ಕಾರದ ಜಲಾನಯನಕ್ಕೆ ಸಂಬಂಧಪಟ್ಟಂತೆ ಇನ್ನಿತರ ರಾಜ್ಯ ಸರ್ಕಾರಗಳು ಅಂದರೆ ತಮಿಳುನಾಡು, ಮಹಾರಾಷ್ಟ್ರವ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಒಪ್ಪಿಗೆಗೆ ಆಗಲಿ ಅಥವಾ ಯಾವುದೇ ರೀತಿಯ ಒಂದು ಸಾಂಕೇತಿಕವಾದಂಥ ಸೂಚನೆ ಆಗಲಿ ಅವರಿಗೆ ಸಿಕ್ಕಿಲ್ಲ, ಈ ವಿಚಾರವನ್ನು ನಾವು ಅನೇಕ ಸಲ ಎತ್ತಿ ಕೇಂದ್ರ ಸರ್ಕಾರದ ಗಮನಕ್ಕೂ ತಂದಿದ್ದೇವೆ. ಮತ್ತು ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ, ತೆಲುಗು ಗಂಗಾ ಒಪ್ಪಂದದ ಪ್ರಕಾರ ಷರತ್ತುಗಳನ್ನು ಉಲ್ಲಂಘಿಸಿರತಕ್ಕಂಥ ಅಪರಾಧವನ್ನು ಆಂಧ್ರ ಸರ್ಕಾರದವರು ಮಾಡಿದ್ದಾರೆ, ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇನೆ.

ನಾನು ಕೇಂದ್ರ ಸರ್ಕಾರಕ್ಕೆ ಪುನಃ ನಾನು ಈ ಬಗ್ಗೆ ಪಂತ್ರೊಂದು ಪತ್ರವನ್ನು ಬರೆಯುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಅನೇಕ ಸಲ ಪತ್ರಗಳನ್ನು ಕೇಂದ್ರಕ್ಕೆ ಬರೆದಿದ್ದೇನೆ. ಮುಖ್ಯವಾಗಿ ಇದರಲ್ಲಿ ಎರಡನೇ ಷರತ್ತಿನ ಪ್ರಕಾರ ಯಾವ ಒಂದು ಉದ್ದೇಶಕ್ಕಾಗಿ ೧೫ ಟಿ.ಎಂ.ಸಿ.ಗಳಷ್ಟು ನೀರನ್ನು ಮದ್ರಾಸ್‌ನಗರಕ್ಕೆ ಕುಡಿಯುವ ನೀರಿನ ಸಲುವಾಗಿ ತೆಗೆದುಕೊಂಡು ಹೋಗಲು ಒಪ್ಪಂದ ಆಗಿದೆಯೋ ಅಷ್ಟಕ್ಕೆ ಮಾತ್ರ ಸೀಮಿತಗೊಳಿಸಿ ಅವರು ಕೆನಾಲ್ ತೆಗೆಯಲು ಕೇಂದ್ರ ಸರ್ಕಾರ ಒಪ್ಪಿದೆ. ಇದೊಂದೇ ಉದ್ದೇಶಕ್ಕೆ ಮಾತ್ರ ನೀರು ಉಪಯೋಗ ಆಗಬೇಕು ಬೇರೆ ಉದ್ದೇಶಕ್ಕೆ ನೀರು ಉಪಯೋಗ ಆಗಬಾರದು ಎಂದು ಕೇಂದ್ರ ಸರ್ಕಾರ ಹೇಳಿರುವುದರಿಂದ ಇದನ್ನು ನೋಡಿಕೊಳ್ಳುವ ಜವಾಬ್ದಾರಿ ಕೇಂದ್ರ ಸರ್ಕಾರದ್ದು ಸಹ ಆಗಿದೆ. ಮತ್ತೆ ಮಾನ್ಯ ವೀರಪ್ಪ ಮೊಯಿಲಿ ಅವರು ಬಚಾವತ್ ಅವಾರ್ಡಿನಿಂದ ನಮ್ಮ ರಾಜ್ಯಕ್ಕೆ ನ್ಯಾಯ ಸಿಕ್ಕಿಲ್ಲವೆಂದು ಏನು ಹೇಳಿದರು, ಅದು ನಿಜ. ನಮಗೆ ಎಷ್ಟು ನೀರು ಸಿಗಬೇಕಾಗಿತ್ತೋ ಅಷ್ಟು ನೀರು ಸಿಕ್ಕಿಲ್ಲ. ಈ ಬೇಸಿನ್ನಿನ ಅರ್ಧ ಭಾಗ ಅಥವಾ ಶೇಕಡ ೬೦ರಷ್ಟು

ಭಾಗ ನಮ್ಮ ರಾಜ್ಯದಲ್ಲಿಯೇ ಇದೆ. ಆದರೆ ನಮಗೆ ಮೂರನೇಯ ಒಂದು ಭಾಗಕ್ಕಿಂತ ಕಡಿಮೆ ಪಾಲಿನಷ್ಟು ನೀರು ಸಿಕ್ಕಿದೆ. ನಮಗೆ ಅನ್ಯಾಯವಾಗಿದೆ ಎಂಬುದಕ್ಕೆ ಇದು ಒಂದೇ ಉದಾಹರಣೆ ಸಾಕು. ಇದರ ಜೊತೆಗೆ ಈ ಜಲಾನಯನ ಪ್ರದೇಶದ ಶೇಕಡ ೬೦ ರಷ್ಟು ಪ್ರದೇಶಗಳು ಪುನಃ ಪುನಃ ಅಭಾವ ಪರಿಸ್ಥಿತಿಗೆ ಒಳಗಾಗುತ್ತಿವೆ ಎಂಬುದು ಎಲ್ಲರಿಗೂ ಗೊತ್ತು, ಮತ್ತು ಕೇಂದ್ರ ಸರ್ಕಾರಕ್ಕೂ ಸಹ ಗೊತ್ತು. ನಮ್ಮ ಅಕ್ಕಪಕ್ಕದ ರಾಜ್ಯಗಳವರಿಗೂ ಸಹ ಇದು ಗೊತ್ತು. ಆದರೂ ಸಹ ಈ ಟ್ರಿಬ್ಯುನಲ್ ತೀರ್ಪಾನವನ್ನು ನಾವು ಹಿಂದೆ ವಿರೋಧ ಮಾಡದೆ ಒಪ್ಪಿಕೊಂಡಿದ್ದೇವೆ. ಇದರ ಬಗ್ಗೆ ನಾವು ಪ್ರತಿಭಟನೆಯನ್ನು ವ್ಯಕ್ತ ಮಾಡಲಿಲ್ಲ. ಇದೇ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಕೊಟ್ರಪ್ಪನವರು ಮತ್ತು ಮಾನ್ಯ ಬಾಬುರೆಡ್ಡಿ ತುಂಗಳ್ ಅವರು ಒಂದು ಮಾತನ್ನು ಹೇಳಿದರು. ಏನೆಂದರೆ, ಅಕಸ್ಮಾತ್ ಏನಾದರು ೨ ಸಾವಿರದ ಇಸವಿಯ ಹೊತ್ತಿಗೆ ನಮಗೆ ಕೊಟ್ಟಿರುವ ನೀರನ್ನು ನಾವು ಬಳಸಿಕೊಳ್ಳದಿದ್ದರೆ ಏನಾಗಬಹುದು, ಈ ರೀತಿ ಆದರೆ ನಮಗೆ ಈ ನೀರಿನ ಮೇಲಿರುವಂತಹ ಹಕ್ಕನ್ನು ನಾವು ಕಳೆದುಕೊಳ್ಳುತ್ತೇವೋ ಹೇಗೆ ಎಂದು ಕೇಳಿದರು ? ಇದೇ ವಿಚಾರದಲ್ಲಿ ಮಾನ್ಯ ವೀರಪ್ಪ ಮೊಯ್ಲಿ ಅವರು ಸ್ವಲ್ಪಮಟ್ಟಿಗೆ ತಮ್ಮ ಭಯವನ್ನು ವ್ಯಕ್ತ ಮಾಡಿದರು. ಆದರೆ ನಾವು ಪಾಲಿನ ನೀರಿನ ಮೇಲಿರುವಂತಹ ಹಕ್ಕನ್ನು ನಾವು ಕಳೆದುಕೊಳ್ಳುವುದಿಲ್ಲ. ಈ ಒಂದೇ ಕಾರಣದಿಂದ ಈ ಕೆಲಸ ಶಿಥಿಲವಾಗಬೇಕೆಂದು ನಾನು ಇಲ್ಲಿ ಹೇಳುವುದಿಲ್ಲ. ಈ ಬಗ್ಗೆ ನಮ್ಮ ಪ್ರಯತ್ನ ಏನಿರಬೇಕೆಂದರೆ. ಎರಡು ಸಾವಿರದ ಇಸವಿಯೊಳಗೆ ನಮಗೆ ಸೇರಿದಂಥ ಎಲ್ಲಾ ನೀರನ್ನು ಬಳಸಿಕೊಳ್ಳುವಂಥ ತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಬೇಕು. ಕೊನೆಯ ಪಕ್ಷ ನೂರಕ್ಕೆ ನೂರರಷ್ಟು ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಸಹ ಇದನ್ನು ಬಳಸಿಕೊಳ್ಳಲು ಅಗತ್ಯವಾದಂಥ ಪ್ರೊಟೆಕ್ಟಿವ್ ಅನ್ನು ಕ್ರಿಯೇಟ್ ಮಾಡಬೇಕು, ಇದಕ್ಕೆ ಅಗತ್ಯವಾದ ಇನ್ ಫಾಸ್ಟ್ರಕ್ಚರ್ ಅನ್ನು ಕ್ರಿಯೇಟ್ ಮಾಡಬೇಕು. ಇದಕ್ಕೆ ಅಗತ್ಯವಾದ ಕಾಲುವೆ ಮತ್ತು ಒಡ್ಡುಗಳು ನಿರ್ಮಾಣ ಆಗಬೇಕು. ನಾನು ಈಗ ಬಚಾವತ್ ಆಯೋಗದ ವರದಿಯ ೧೪ನೇ ಕ್ಲಾಸ್‌ನ್ನು ಓದುತ್ತೇನೆ. ಇದನ್ನು ಮಾನ್ಯ ಸಭೆಗೆ ಓದಿ ಹೇಳಿದರೆ ಬಹುಶ: ಪರಿಸ್ಥಿತಿ ಏನೆಂಬುದು ಸ್ಪಷ್ಟವಾಗುತ್ತದೆ.

> "At any time after the 31st May. 2000 this order may be reviewed or revised by a competant au hority or Tribunal but such review or revision shall not as far as possible disturb any utilisation that may have been undertaken by any State within the limits of the allocation made to it under the foregoing clauses."

ಅಂದರೆ ಯಾವ ನೀರನ್ನು ಎಷ್ಟು ಪ್ರಮಾಣದಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಹಂಚಲಾಗಿದೆಯೋ ಅಷ್ಟು ನೀರನ್ನು ಆ ಒಂದು ಮಿತಿಗೆ ಒಳಪಟ್ಟು ಉಪಯೋಗ ಮಾಡುವುದಕ್ಕೆ ನಮಗೆ ಸ್ವಾತಂತ್ರ್ಯ ಇದೆ. ಮುಂದೆ ಅಂದರೆ ಎರಡು ಸಾವಿರದ ಇಸವಿಯ ನಂತರ ಈ ನಿರ್ಬಂಧಕ್ಕೆ ಒಳಪಟ್ಟು ರಿವ್ಯೂ ಮಾಡ ಬಹುದು, ಇದೇ ಟ್ರಿಬ್ಯುನಲ್‌ನ ಕ್ಲಾಸ್ ೧೫ರಲ್ಲಿ ಈ ರೀತಿ ಹೇಳಿದೆ ;—

> "Nothing in the order of this Tribunal shall impair the right. or power or authority of any State to regulate within the boundries the use of waters within the State in a manner not inconsistent with the order of this Tribunal."

ಮಾನ್ಯ ಅಧ್ಯಕ್ಷರೆ, ೨೦೦೦ ವರ್ಷದ ನಂತರ ಕೂಡ ಏನಾದರೂ ಹೆಚ್ಚುವರಿ ನೀರು ಇದ್ದರೆ ಅದರ ವಿತರಣೆ ಹೇಗೆ ಆಗಬೇಕು ಎನ್ನುವುದರ ಬಗ್ಗೆ ಈ ಒಂದು ಟ್ರಿಬ್ಯುನಲ್ ಆವಾರ್ಡ್‌ನಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟಿದೆ. ಈ ದೃಷ್ಟಿಯಿಂದ ಇದು ಒಂದು ವಿಶಿಷ್ಟವಾದಂಥ ಟ್ರಿಬ್ಯುನಲ್ ಎಂದು ಹೇಳುತ್ತೇನೆ. ೨೦೦೦ ವರ್ಷದ ನಂತರವೂ ಕೂಡ ಸಂದೇಶಕ್ಕೆ ಎಡೆ ಕೊಟ್ಟಿಲ್ಲ.

**ಶ್ರೀ ಎಂ.ವೀರಪ್ಪ ಮೊಯಿಲಿ.**—ತಾವು ಕ್ಲಾಸ್ ೧೬ ಓದಿದಿರಿ. ಕ್ಲಾಸ್ ೧೪ರ ಪ್ರಕಾರ It is ambigious. It is not very clear. "At any time after 31st May 2000, this order may be reiewed".

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೆ, ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಈ ಡಿಬೇಟಿನಿಂದ ಉಪಯೋಗವಾಗುವುದಿಲ್ಲ. This debate is not going to hely Karnataka's interest. For God's sake, please try to confine yourself about the argument advanced by the Chief Minister. I know what is going to happen after 2003 Ad...ಮಾನ್ಯ ಕೊಟ್ರಪ್ಪನವರು ಹೇಳಿದ ಮಾತು ಒಂದು ಕಡೆ ಇರಲಿ. ಕರ್ನಾಟಕದ ಇಂಟರೆಸ್ಟ್‌ನ್ನು ನಾವು ಉಳಿಸಬೇಕು ಎಂದು ಇದ್ದರೆ ಈ ಸದನದಲ್ಲಿ ಚರ್ಚೆಯಾಗುವುದು ಅಪ್ರಕೃತ, ಬೇಕಾದರೆ ಮುಖ್ಯ ಮಂತ್ರಿಗಳು ಕಾರ್ಯಾಲಯಕ್ಕೆ ಹೋಗಿ ಚರ್ಚೆ ಮಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಕೊಟ್ರಪ್ಪನವರದ ವಾದವನ್ನು ಒಪ್ಪಿದ್ದೇವೆ ಎಂದು ಹೇಳಿದರೆ It may not be that borrect legally alsa. ಆದನ್ನು ಬಹುಶಃ ಚರ್ಚೆ ಮಾಡಬಹುದು. Instead of explaining it now across the table. Howover, one thing is, if you do not utilise it, it may lead to dongerous dinensions...

ಶ್ರೀ ರಾಮಕೃಷ್ಣ ಹೆಗಡೆ.—ಆ ರಿಸ್ಕನ್ನು ನಾವು ತೆಗೆದುಕೊಳ್ಳಬೇಕು ಎಂದು ಹೇಳುವುದಿಲ್ಲ. ನಮ್ಮ ಸರ್ವ ಪ್ರಯತ್ನ ಏನೆಂದರೆ, ಈ ಆವರಿಗಿಂತ ಮೊದಲು ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಎನ್ನುವುದು. ಆದಕ್ಕಾಗಿ ಕಳೆದ ವರ್ಷ ನಾವು ಬಡ್ಜೆಟ್‌ನಲ್ಲಿ ೩೦೦ ಕೋಟಿ ಒದಗಿಸಿದ್ದೆವು, ಕೃಷ್ಣ ವಲಯಕ್ಕೆ ೨೦೦ ಕೋಟಿ ರೂಪಾಯಿಯಷ್ಟು ಹಣವನ್ನು ಒದಗಿಸಿದ್ದೇವೆ. ಆದರೆ ದುರ್ದೈವದಿಂದ ಸಂಪನ್ಮೂಲಗಳ ಕೊರತೆಯಾದುದರಿಂದ ಅಷ್ಟು ಹಣವನ್ನು ಒದಗಿಸಲಿಕ್ಕೆ ಆಗಲಿಲ್ಲ. ನಾನು ಈ ಒಂದು ಬಡ್ಜೆಟ್‌ನಲ್ಲಿ ಅನ್ಸ್‌ಮೆಂಟ್ ಮಾಡಿದ ಮೇಲೆ, ನಾನು ಒಂದು ಸಂದರ್ಭದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅದಕ್ಕೆ ದಿಟ್ಟ ಎದೆಗಾರಿಕೆ ಎಂದು ಹೇಳುತ್ತಿರೋ, ಅಥವಾ ಅತಿಶಯೋಕ್ತಿ ಎಂದು ಹೇಳುತ್ತಿರೋ ಗೊತ್ತಿಲ್ಲ, ಒಂದು ಮಾತನ್ನು ಹೇಳಿದೆ. ಅದು ಏನೆಂದರೆ, ಇನ್ನು ಎರಡು ವರ್ಷದ ನಂತರ ಅಂದರೆ ೮೯ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ವರ್ಷವೂ ನಾವು ಸುಮಾರು ಒಂದು ಸಾವಿರ ಕೋಟಿವರೆಗೆ ಈ ನೀರಾವರಿ ಕೆಲಸಕ್ಕಾಗಿ ಹಣವನ್ನು ತೆಗೆದರಿಸತಕ್ಕಂಥ ಪ್ರಸಂಗ ಬರುತ್ತದೆ, ಅದು ಅಗತ್ಯ ಎಂದು ಹೇಳಿದ್ದೇನೆ. ೮೯ನೇ ಪಂಚವಾರ್ಷಿಕ ಯೋಜನೆ ಅಂದರೆ ಅದು ಈ ವರ್ಷ ಬಿಟ್ಟು ಮುಂದಿನ ವರ್ಷದ ಎಂಡ್‌ಗೆ ಶುರುವಾಗುತ್ತದೆ. ಅಲ್ಲಿಯವರೆಗೆ ನಾವು ಎಷ್ಟರಮಟ್ಟಿಗೆ ಹೆಚ್ಚುಮಾಡಲಿಕ್ಕೆ ಸಾಧ್ಯವೋ ೩೦೦ ಕೋಟಿ, ೪೦೦ ಕೋಟಿ, ೫೦೦ ಕೋಟಿಯಾಗಲಿ ಅಷ್ಟರಮಟ್ಟಿಗೆ ನಾವು ಮಾಡಬೇಕಾಗುತ್ತದೆ. ಆದರೆ ಮಾನ್ಯ ಬಾಬುರೆಡ್ಡಿ, ತುಂಗಳ್‌ರವರು ಹೇಳಿದಹಾಗೆ ನಮ್ಮ ಮನಸ್ಸು ಇದರ ವಿಚಾರದಲ್ಲಿ ತಿಳಿಯಾಗಿರಬೇಕು. ಎಲ್ಲಾ ಬಾಬುಗಳಿಗೂ ಅಷ್ಟೇ ಮಹತ್ವ ಕೊಟ್ಟು ನಾವು ಎಲ್ಲಾ ಕೆಲಸಗಳಿಗೂ ಅಷ್ಟೇ ಮಹತ್ವ ಕೊಟ್ಟು ಅಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಈ ವಿಚಾರದಲ್ಲಿ ಮಾನ್ಯ ದೇವೇಗೌಡರು ಒಂದಲ್ಲ ಹಲವಾರು ಬಾರಿ ಸ್ಪಷ್ಟಪಡಿಸಿದ್ದಾರೆ. ಆಂಧ್ರಪ್ರದೇಶದ ಉದಾಹರಣೆಯನ್ನು ಕೊಟ್ಟಿದ್ದಾರೆ. ನಾಗಾರ್ಜುನ ಸಾಗರ ಮುಗಿಯುವವರೆಗೂ ಎಷ್ಟೇ ಕಷ್ಟ ಪರಿಸ್ಥಿತಿ ಬಂದರೂ ಆವರು ರಸ್ತೆಗೆ ದುಡ್ಡು ಒದಗಿಸಿರಲಿಲ್ಲ, ಶಾಲಾ ಕಾಲೇಜುಗಳಿಗೆ ದುಡ್ಡು ಒದಗಿಸಲಿಲ್ಲ. ಆ ಕಾಲದಲ್ಲಿ ಎರಡು ರೂಪಾಯಿಗೆ ಕೆಲೋ ಅಕ್ಕಿಯಾಗಲಿ, ಬಾಕಿಸೋಪಲಿಸಂ ಕಾರ್ಯ ಕ್ರಮಗಳಾಗಲೀ ಇರಲಿಲ್ಲ. ಎಲ್ಲಾ ರಿಸೋರ್ಸನ್ನು ಅದಕ್ಕಾಗಿ ಉಪಯೋಗಿಸಿದ್ದರಿಂದ ಆ ಒಂದು ಕಾರ್ಯಕ್ರಮ ಅವರಿಗೆ ಸರಿಯಾಗಿ ಮುಕ್ತಾಯವಾಯಿತು. ಇಲ್ಲಿ ನಾವು ಕೂಡ ಅದೆ ರೀತಿಯಲ್ಲಿ ಮಾಡಬೇಕು. ಬೇಕಾದರೆ ಒಂದು ಗೊತ್ತುಪಡಿಯನ್ನು ಮತ್ತು ಶರಾವನ್ನು ಪಾಸು ಮಾಡಿ ಮೆಂಟಿನೆನ್ಸ್ ಬಗ್ಗೆ ಕೂಡ ಎಷ್ಟರ ಮಟ್ಟಿಗೆ ನಾವು ಹಣ ಒದಗಿಸಿ, ಬಾಕಿ ಎಲ್ಲಾ ಹಣವನ್ನು ಕಾವೇರಿ ಮತ್ತು ಕೃಷ್ಣ ಯೋಜನೆಗಳಿಗೆ ಡೈವರ್ಟ್ ಮಾಡಬೇಕೆಂದು ಎಲ್ಲರ ಅಭಿಪ್ರಾಯವಿದ್ದರೆ ನಾವು ಸಿದ್ಧರಿದ್ದೇವೆ. ಆದರೆ ನಮ್ಮ ಇಂಡಿವೀಜಿಯಲ್ ಕಾನ್ಸ್ಟಿಟ್ಯುಎನ್ಸ್ ವಿಚಾರ ಬಂದಾಗ ಇದನ್ನು ಮರೆತು ಬಿಡುತ್ತೇವೆ. ಹೈಸ್ಕೂಲ್‌ಗಳು ಬೇಕು ಕಾಲೇಜುಗಳು ಬೇಕು ಸೇತುವೆಗಳು ಬೇಕು. ಏನನ್ನುವ ವಿಚಾರ ಬರುತ್ತದೆ. ನೀರಾವರಿ ಎಂದೆಂದಿಗೂ ಆಗದಂತ ಕೆಲವು ಪ್ರದೇಶಗಳು ಇವೆ. ಇದರಲ್ಲಿ ಕೋಲಾರ ಜಿಲ್ಲೆಯಲ್ಲಿ ಯಾವ ನೀರಾವರಿ ಯೋಜನೆಗಳನ್ನು ಮಾಡಬಹುದು ? ಚಿಕ್ಕ ನೀರಾವರಿ ಯೋಜನೆ, ಕೆಲವು ಕೆರೆಗಳು ಮತ್ತೆ ಒಂದೆರಡು ದೊಡ್ಡ ಕೆರೆಗಳನ್ನು ಮಾಡಬಹುದು. ಆದರೆ ಅಲ್ಲಿ ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದಕ್ಕೆ

ಸಾಧ್ಯವೇ ಇಲ್ಲ. ಅಂತಹ ಪ್ರದೇಶಗಳಲ್ಲಿರುವ ಜನರಿಗೆ ನಾವು ಸಾಮಾನ್ಯವಾಗಿ ಅನುಕೂಲತೆಗಳನ್ನು ಒದಗಿಸಿಕೊಡಬೇಕಾಗುತ್ತದೆ ಅದಕ್ಕಾಗಿ ಹಣವನ್ನು ಇಡಲೇ ಬೇಕಾಗುತ್ತದೆ. ತಾವು ಎತ್ತಿದಂಥ ವಿಚಾರ ಬಹಳ ಮಹತ್ವವಾದುದು. ಅದು ಸಣ್ಣ ವಿಚಾರವಲ್ಲ ಮೊನ್ನೆ ಮಾನ್ಯ ಶ್ರೀ ದೇವೇಗೌಡರು ಸಂಸತ್ತಿನ ಸದಸ್ಯರನ್ನು ಭೇಟಿಯಾಗಿದ್ದರೂ ಇದರ ಬಗ್ಗೆ ಒಂದು ಅಭಿಪ್ರಾಯಕ್ಕೆ ಬಂದು ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿದ್ದರು. ಈ ವಿಚಾರದಲ್ಲಿ ನಾನು ಶ್ರೀ ದಿನೇಶ್ ಸಿಂಗ್ ಅವರನ್ನು ಭೇಟಿ ಮಾಡಿ ತೆಲುಗು ಗಂಗಾ ವಿಚಾರದಲ್ಲಿ ಯಾವ ಸಂದರ್ಭದಲ್ಲಿಯೂ ಮಾರ್ಪಾಡು ಮಾಡಿದಂತ ರೀತಿಯಲ್ಲಿ ನೀವು ಒಪ್ಪುವುದಕ್ಕೆ ಸಾಧ್ಯವಿಲ್ಲ. ನೀವು ಹಾಕಿದ ಶರತ್ತನ್ನೇ ಮುರಿದಂತಾಗುತ್ತದೆ. ಅವರು ದಬಾಯಿಸಿ ಕೊಂಡು ಮಾಡಿಕೊಂಡು ಹೋದರೆ ಕೇಂದ್ರ ಸರ್ಕಾರದವರು ಕಣ್ಣು ಮುಚ್ಚಿಕೊಂಡು ಕುಳಿತಂ ಕೊಳ್ಳುವುದಕ್ಕೆ ಆಗುವುದಿಲ್ಲ. ೫೦-೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದು ವೇಸ್ಟ್ ಆಗುತ್ತದೆಂದು ಹೇಳಬಹುದು. ಆಹಾರ ಪದಾರ್ಥಗಳನ್ನು ಎಲ್ಲಿ ಬೆಳೆದರೆ ಏನು ನಾವೆಲ್ಲಿ ಒಂದೇ ದೇಶದಲ್ಲಿದ್ದೇವೆ. ಅಲ್ಲಿ ಕೈಗಾರಿಕೆಗಳನ್ನು ಮಾಡಲಿ ಎನ್ನುವಂತ ವಾದ ಅವರಿಂದ ಬರಬಹುದು. ಇದು ಸರಿಯಲ್ಲ. ಇದನ್ನು ನಾವು ವಿರೋಧಿಸುತ್ತೇವೆ. ಮಾರ್ಪಾಡಾಗಬಹುದಂತಹ ರೀತಿಯಲ್ಲಿ ಎಂದೆಂದಿಗೂ ಒಪ್ಪತಕ್ಕಂಥದ್ದು ಸಾಧ್ಯವಿಲ್ಲ, ತೆಲುಗು ಗಂಗಾ ಒಪ್ಪಂದದ ಶರತ್ತನ್ನು ಮೀರಿದರೆ, ಕೇಂದ್ರ ಸರ್ಕಾರದವರು ಆಂಧ್ರ ಸರ್ಕಾರದವರಿಗೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಮುಖ್ಯ ಮಂತ್ರಿಗಳು ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ನಿನ್ನೆ ರಾತ್ರಿ ಟಿ. ವಿ. ಯಲ್ಲಿ ತೆಲುಗು ಗಂಗಾ ಬಗ್ಗೆ ಒಂದು ಸುದ್ದಿ ಬಂತು. ತೆಲುಗು ದೇಶಂ ನಾಯಕರಾದ ಉಪೇಂದ್ರ ಅವರು ಕೇಂದ್ರ ಸರ್ಕಾರವು ತೆಗೆದುಕೊಂಡಿರತಕ್ಕಂಥ ನಿರ್ಣಯಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಅದನ್ನು ಆಹ್ವಾನಿಸಿದ್ದಾರೆ. ಅದು ಏನು ಸಮಾಚಾರ ಎನ್ನುವುದನ್ನು ತಿಳಿದುಕೊಳ್ಳಿ. ತಾವು ಈಗ ಏನಂ ಉತ್ತರ ಕೊಟ್ಟಿದ್ದೀರಿ. ಅದಕ್ಕೂ ೧೯೮೫ ನೇ ಇಸವಿ ಆಗಸ್ಟ್ ೧೦ ನೇ ತಾರೀಖು ಕೊಟ್ಟಿರುವ ಉತ್ತರಕ್ಕೂ ಏನೂ ವ್ಯತ್ಯಾಸವಿಲ್ಲ. ಇದು ಹಿಂದೂ ಪತ್ರಿಕೆಯಲ್ಲಿ ಬಂದಿದೆ.

> "The Karnataka Chief Minister Mr. Ramakrishna Hegde said to-day that the State would not have any objection to Andhra Pradesh taking up any project for the utilisation of Krishna Water so long as it conformed to the award of the Bachavat Tribunal.
>
> The Andhra Pradesh could also utilise till 2000 A D any surplus water that may be available from the Krishna River. But that would not create for it any permanent criterion right, Mr. Hegde said."

4 00 P. M

ಶ್ರೀ ರಾಮಕೃಷ್ಣ ಹೆಗಡೆ.—ಅವರು ಯೂಸ್ ಮಾಡಿರುವ ಶಬ್ದವನ್ನೇ ನಾನು ಯೂಸ್ ಮಾಡಿದ್ದೇನೆ. I have used the same words as has been used in the Bhchawat Commission award.

ಶ್ರೀ ಬಿ. ಬಸವಲಿಂಗಪ್ಪ.—ತಮ್ಮ ಹೇಳಿಕೆ ಬೇರೆ ಇದೆ. ಎರಡು ಸಾವಿರ ವರ್ಷ ಎ. ಡಿ. ಒಳಗೆ ತೆಲುಗು ಪ್ರದೇಶದವರು ಏನು ಬೇಕಾದರೂ ಎಷ್ಟು ಬೇಕಾದರೂ ಉಪಯೋಗಿಸಿಕೊಳ್ಳಬಹುದು ಹಾಗೆ ಎಂದು ಹೇಳಿ ಒಂದು ಪ್ರಶ್ನೆ, ಇನ್ನೊಂದು ಎರಡು ಸಾವಿರ ವರ್ಷಗಳವರೆಗೆ ತಾವು ಏನು ಮಾಡುತ್ತೀರಿ ಎನ್ನುವ ಕಾರ್ಯಕ್ರಮ ಅದು ಸ್ಪಷ್ಟವಾಗಬೇಕು. ತಾವೇ ಹೇಳಿದಿರಿ. ನಾಗಾರ್ಜುನ ಸಾಗರ ಕಟ್ಟಿ ಕಟ್ಟುವಾಗ ಯಾವ ರೀತಿಯಾಗಿ ಆಂಧ್ರ ಪ್ರದೇಶದವರು ಎಲ್ಲಾ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿ ಅದನ್ನು ಪ್ರಾರಂಭ ಮಾಡಿ ಮುಗಿಸಿದರು ಎಂದು ಈಗ ಅದೇ ರೀತಿಯಾಗಿ ತಾವು ಮಾಡಬೇಕಾಗುತ್ತದೆ ಈಗ ನಾವು ಬಡ್ಜೆಟ್ ನೋಡುತ್ತಿದ್ದೇವೆ. ನಾವೆಲ್ಲರೂ ಅರ್ಧಂಬರ್ಧ ಒಪ್ಪಿದ್ದೇವೆ, ಆದ್ದರಿಂದ, ಈ ಬಗ್ಗೆ ಏನಾದರೂ ಒಂದು ಕಾರ್ಯ ಕ್ರಮ ತೆಗೆದುಕೊಳ್ಳುವುದಕ್ಕೆ

ಏನಾದರೂ ಧೈರ್ಯ ಮಾಡುತ್ತೀರಾ ? ಒಂದು ನಿಲುವನ್ನು ತೆಗೆದುಕೊಳ್ಳುತ್ತೀರಾ ? ಕರ್ನಾಟಕ ರಾಜ್ಯದ ಹಿತರಕ್ಷಣೆ ಮಾಡಲಿಕ್ಕೆ ನಿವೇನಾದರೂ ಧೈರ್ಯವಾಗಿ ಹೆಜ್ಜೆ ಇಟ್ಟು ತೀರ್ಮಾನ ತೆಗೆದುಕೊಳ್ಳುತ್ತೀವೆ ಎನ್ನುವ ಬಗ್ಗೆ ತಾವು ಇವೊತ್ತು ಉತ್ತರ ಕೊಡಬೇಕು. ಇವೊತ್ತಿನ ದಿವಸ ಬಡ್ಜೆಟ್ ಪೂರ್ಣವಾಗಿ ಆಗಿದೆ. ಆದ್ದರಿಂದ ತಾವೇನಾದರೂ ಒಂದು ನಿರ್ಣಯ ಮಾಡಿ ರಾಜ್ಯದ ಹಿತದೃಷ್ಟಿಯಿಂದ ತಾವು ನಿರ್ಣಯ ತೆಗೆದುಕೊಳ್ಳಿ ನಾವು ನಿಮ್ಮ ಹಿಂದೆ ಇದ್ದೇವೆ. ನಾವು ಈ ರೀತಿ ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿ ಕೆಲಸ ಮಾಡಿ ನಾಲ್ಕೈದು ವರ್ಷಗಳಿಂದಲೂ ಹಣ ಒದಗಿಸುತ್ತೇವೆ, ಒದಗಿಸುತ್ತೇವೆ ಎಂದೂ ಹೇಳಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಎಷ್ಟೆಷ್ಟು ಒದಗಿಸಿದ್ದೀರಿ ಅದು ತಮಗೆ ಗೊತ್ತು ಮಾಡಲಿಕ್ಕೆ ಆಗಿಲ್ಲಿ ಈ ರೀತಿಯಾಗಿ ಮುಂದಕ್ಕೆ ಹೋಗುತ್ತಾ ಹೋದರೆ ಬಚಾವತ್ ಕಮಿಷನ್ ಪ್ರಕಾರ ಏನು ನಿರ್ಣಯ ಕೊಟ್ಟಿದ್ದಾರೆ ಅದರ ಪ್ರಕಾರ ಹಿತರಕ್ಷಣೆ ಮಾಡುತ್ತಾರೆ ಎನ್ನುವ ಬಗ್ಗೆ ನಂಬಿಕೆ ಏನು ತಾವು ದಯವಿಟ್ಟು ಹೇಳಿ ತಾವು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ನೀವೆಲ್ಲಾ ಹೇಳಿದರೆ ನಾನು ಮಾಡುತ್ತೇನೆ, ನೀವು ಒಪ್ಪಿದರೆ ಮಾಡುತ್ತೇನೆ ಎಂದು ಹೇಳುವುದು ಅಲ್ಲ ರಾಜ್ಯದ ಹಿತದೃಷ್ಟಿಯಿಂದ ತಾವೆಲ್ಲ ಒಪ್ಪಬೇಕು ಎಂದು ಹೇಳಿ ಈ ರೀತಿ ತೀರ್ಮಾನ ಮಾಡಿದ್ದೇನೆ ನೀವೆಲ್ಲರೂ ಒಪ್ಪಬೇಕೆಂದು ಹೇಳಿ ನೀವು ಎಷ್ಟು ಕೆಲಸ ಮಾಡುತ್ತೀರಿ, ನಿಮ್ಮ ಧೈರ್ಯ ಎಷ್ಟು ಎಂದು ನೋಡೋಣ ತಮ್ಮಲ್ಲಿ ಒಂದೇ ಒಂದು ಪ್ರಾರ್ಥನೆ ಏನೆಂದರೆ, ತಾವು ಕರ್ನಾಟಕ ರಾಜ್ಯ ಬಿಟ್ಟು ಹೊರಗೆ ಹೋದ ತಕ್ಷಣ ಮನಸ್ಸು ಸಡಿಲ ಮಾಡುತ್ತೀರಿ ಎನ್ನುವಂಥ ಅನುಮಾನ ನನಗೆ ಇದೆ, ಸಡಿಲ ಮಾಡತಕ್ಕ ಮನಸ್ಸು ಬಿಟ್ಟು ದೃಢವಾದ ಮನಸ್ಸು ಮಾಡಿ ತೀರ್ಮಾನ ಹೇಳಿ ಇವೊತ್ತು.

ಶ್ರೀ ರಾಮಕೃಷ್ಣ ಹೆಗಡೆ —ಕರ್ನಾಟಕ ರಾಜ್ಯದ ಹೊರಗೆ ಹೋಗತಕ್ಕದ್ದಾಗಲಿ, ಅಲ್ಲೇ ಇರತಕ್ಕಂತಾದ್ದಾಗಲಿ, ಪ್ರಶ್ನೆ ಇಲ್ಲಿ ಬರುವುದಿಲ್ಲ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರ ಮುಂದೆ ಒಂದು ಸೂಚನೆಯನ್ನು ಇಡುತ್ತೇನೆ. ಸುಮ್ಮನೆ ತೇಲಿಸಿ, ತೇಲಿಸಿ ಮಾತನಾಡುವುದರಲ್ಲಿ ಅರ್ಥ ಇಲ್ಲ. ಇನ್ನೂ ಸಮಯ ಇದೆ, ಏನು ಸಮಯ ಇದೆ ಅಂದರೆ ನಮಗೆ ಎಲ್ಲಾ ಡಿಮ್ಯಾಂಡ್ಸ್, ಪಾಸ್ ಆಗಿಲ್ಲ. ಈಗ ನಮ್ಮ ಪ್ಲಾನ್‌ನಲ್ಲಿ ಈ ವರ್ಷ ೯೦೦ ಕೋಟಿ ರೂಪಾಯಿಗಳನ್ನು ಮಾಡಿದ್ದೇವೆ. ಈ ೯೦೦ ಕೋಟಿ ರೂಪಾಯಿಗಳಲ್ಲಿ ಒದಗಿಸಿರತಕ್ಕದ್ದು ಬೇರೆ ಬೇರೆ ಬಾಬುಗಳಿಗೆ ಹಿಂದಿನ ಪ್ಲಾನ್‌ಗಿಂತಲೂ ಹೆಚ್ಚು ಇಲ್ಲ. ಕೇವಲ ನೀರಾವರಿ ಮತ್ತು ವಿದ್ಯುಚ್ಛಕ್ತಿ ಎರಡು ಬಾಬುಗಳಿಗೆ ನಾವು ಹೆಚ್ಚು ಒದಗಿಸಿದ್ದೇವೆ. ಬೇರೆ ಯಾವುದಕ್ಕೂ, ಆರೋಗ್ಯ ಆಗಲಿ, ಶಿಕ್ಷಣ ಆಗಲಿ ಮತ್ತೊಂದು ವರ್ಗದೊಂದು ಯಾವುದಕ್ಕೂ ಹೆಚ್ಚು ಮಾಡಿಲ್ಲ. ಬೇರೆ ಬೇರೆ ಖಾತೆಗಳಿಗೆ ಅಭಿವೃದ್ಧಿ ವಿಚಾರದಲ್ಲಿ ಯೋಜನಾ ನಿಧಿಯನ್ನು ನಾವು ಎಷ್ಟೆಷ್ಟು ಒದಗಿಸಿದ್ದೇವೆಂದು ನಮ್ಮ ಬಡ್ಜೆಟ್ಟಿನಲ್ಲಿ ಪ್ರತಿಯೊಂದರ ಬಗ್ಗೆಯೂ ತೆಗೆದು ನೋಡಿದರೆ ತಮಗೆ ಗೊತ್ತಾಗುತ್ತದೆ ಇಡೀ ಸಭೆಯಲ್ಲಿ ಒಮ್ಮತದಿಂದ ಪ್ರತಿಯೊಂದು ಬಾಬಿನಿಂದಲೂ ನಾವು ಶೇಕಡ ೨೫ ರಷ್ಟು ಬೊತಾ ಮಾಡಿ ಅದನ್ನು ನಾವು ನೀರಾವರಿಗೆ ಕೊಡುತ್ತೇವೆಂದು ನೀವು ಪಾಸ್ ಮಾಡಿ ಹೇಳಿ ಆ ಪ್ರಕಾರ ನಾವು ಮಾಡುತ್ತೇವೆ. ಆದು ಆದ ಮೇಲೆ ಯಾವುದೇ ಒಬ್ಬ ಮಾನ್ಯ ಸದಸ್ಯರು ಆಯಾಯ ಖಾತೆಗೆ ಸಂಬಂಧಪಟ್ಟಂತೆ ಹೊಸ ಕೆಲಸವನ್ನು ತೆಗೆದುಕೊಳ್ಳಬೇಕು, ಇಲ್ಲಿ ಒಂದು ಕೆಲಸ ಮಾಡಿಕೊಟ್ಟು ಬಿಡಿ ನಮಗೆ ಎಂದು ಹೇಳಿ ಆ ತರಹ ಕೇಳುತ್ತಾರೆ. ಇದಕ್ಕೆ ಇನ್ನೂ ಎರಡು ತಿಂಗಳು ಯೋಚನೆ ಮಾಡುವುದಕ್ಕೆ ಅವಕಾಶ ಇದೆ. ಎಲ್ಲರೂ ಯೋಚನೆ ಮಾಡಿ ಹೇಳಿ,

ಶ್ರೀ ಧರ್ಮಸಿಂಗ್.—ತಾವು ಮುಖ್ಯ ಮಂತ್ರಿಗಳಾಗಿದ್ದೀರಿ, ತಾವು ಅವರಿಗೆ ಕನ್ವೀನ್ಸ್ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ —ನೀವೂ ಮಂತ್ರಿಗಳಾಗಿದ್ದಿರಿ. ತಾವೂ ಸರ್ಕಾರವನ್ನು ನಡೆಸಿದವರು, ಆ ಕಾಲದಲ್ಲಿ ಏನಾಗಿತ್ತು ಎಂಬುದು ತಮಗೂ ಗೊತ್ತಿಂಟು. ಅಲ್ಲಿಗೆ ಈಗ ನಾವು ಹೋಗುವುದು ಬೇಡ. ಎಲ್ಲರ ಒಮ್ಮತದ ಅಭಿಪ್ರಾಯ ಏನೆಂದರೆ ೨೦೦೦ನೇ ವರ್ಷದೊಳಗೆ ಈ ಕೆಲಸವನ್ನು ಮುಗಿಸುವುದಕ್ಕೆ ನಾವೆಲ್ಲರೂ ಸೇರಿ ಪ್ರಯತ್ನ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಂ ಹೇಳುತ್ತಾರೆ, ನೀವು ಎಲ್ಲ ಡಿಪಾರ್ಟ್‌ಮೆಂಟ್‌ಲ್ಲೆಯೂ ೨೦-೨೫ ಪರ್ಸೆಂಟ್ ಕಡಿತಕ್ಕೆ ಒಪ್ಪಿದರೆ ಇದನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು. ಅವರಿಗೂ ಗೊತ್ತು, ತಮಗೂ ಗೊತ್ತು ಅಷ್ಟೆ ಅಲ್ಲ ಈ ಸದನಕ್ಕೂ ಗೊತ್ತು. ಅನೇಕ ವೆಲ್‌ಫೇರ್ ಸ್ಕೀಮ್‌ಗಳು ಏನಿವೆ, ಅವುಗಳಲ್ಲಿ ಯಾವುವು ಪ್ರಾರಂಭವಾಗಿವೆ ಅವುಗಳನ್ನು ಹಾಗೇ ಇಡಿ. ಕೆಲವು ವೆಲ್‌ಫೇರ್ ಸ್ಕೀಂಗಳನ್ನು ತಾವು ಯಾವುದೇ ಕಾರಣಕ್ಕೂ

ನಿಲ್ಲಿಸುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಎಜುಕೇಷನ್ ಸ್ಕೀಮ್ ಏನಿವೆ ಅವುಗಳನ್ನು ಎಲ್ಲಾ ಕಡೆಯಲ್ಲೂ ನೀವು ಕ್ಲೋಸ್ ಮಾಡುವುದಕ್ಕಾಗುವುದಿಲ್ಲ. ಪ್ಲಾನ್ ಸ್ಕೀಂನಲ್ಲಿರತಕ್ಕ ಯೋಜನೆಗಳಿಗೆ ನೀವು ಹಣವನ್ನೊದಗಿಸಬೇಕಾಗುತ್ತದೆ. ಇಲ್ಲದಿದ್ದರೆ ಕೇಂದ್ರದಿಂದ ನಿಮಗೆ ಹಣ ಸಿಕ್ಕುವುದಿಲ್ಲ ನಾವು ತಮಗೆ ಏನು ಹೇಳುತ್ತಿದ್ದೇನೆಂದರೆ, ರಿಸೋರ್ಸ್‌ಸ್ ಮೊಬಲೈಸೇಷನ್ ಮಾಡಿ ಕೊಳ್ಳುವುದರಲ್ಲಿ ನೀವು ಫೇಲ್ಯೂರ್ ಆಗಿದ್ದೀರಿ. ಏಕೆಂದರೆ ಕಳೆದ ೫ ವರ್ಷದ ಅವಧಿಯಲ್ಲಿ ೮೦೦ ಕೋಟಿ ರೂಪಾಯಿಂ ಖೋತಾ ಆಗಿದೆ. ಇದನ್ನು ತಾವು ಒಪ್ಪಿಕೊಳ್ಳ ಬೇಕಾಗುತ್ತದೆ,

ಇನ್ನು ಎರಡನೆಯದಾಗಿ ನಾನು ಸ್ಪಷ್ಟವಾಗಿ ಕೇಳಿದ್ದೇನೆ. ೨೦೦೦ನೇ ಇಸವಿಯೊಳಗೆ ಸುಮಾರು ೭೦೦ ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗ ಮಾಡಿಕೊಳ್ಳುವುದು ಒಂದುಕಡೆ ಇದೆ. ಆದಾದ ನಂತರ ಬಚಾವತ್ ಅವಾರ್ಡ್ ಪುನರ ಆದನ್ನು ರೀ ಓಪನ್ ಮಾಡುವುದಕ್ಕೆ ಅವಕಾಶ ಇದೆ, ಆದರೂ ಕೂಡ ಇದರಲ್ಲಿ ಇನ್ನೊಂದು ಪ್ರೊವಿಷನ್ ಏನಿದೆ ಎಂದರೆ ೨೧೩೦ ಟಿ.ಎಂ.ಸಿ.ಎಫ್.ಟಿ. ಒಟ್ಟು ನೀರಿನಲ್ಲಿ ೫೦ ಪರ್ಸೆಂಟ್ ಕರ್ನಾಟಕ, ೩೫ ಪರ್ಸೆಂಟ್ ಮಹಾರಾಷ್ಟ್ರ, ೧೫ ಪರ್ಸೆಂಟ್ ಆಂಧ್ರ ಪ್ರದೇಶಕ್ಕೆ ಎಂದು ಇದೆ. ಇದರಲ್ಲಿ ಹೆಚ್ಚಿಗೆ ನೀರು ಬಂದರೆ ೨೫ ಪರ್ಸೆಂಟ್ ಮಹಾರಾಷ್ಟ್ರ, ೨೫ ಪರ್ಸೆಂಟ್ ಆಂಧ್ರ, ೫೦ ಪರ್ಸೆಂಟ್ ಕರ್ನಾಟಕದವರು ಉಪಯೋಗ ಮಾಡಿಕೊಳ್ಳಬೇಕು. ಇದು ೨೧೩೦ ಟಿ.ಎಂ.ಸಿ.ಎಫ್.ಟಿ ಗಿಂತ ಜಾಸ್ತಿ ನೀರು ಇದ್ದರೆ. ಇದರಲ್ಲಿ ಇನ್ನೂ ಹೆಚ್ಚಿನ ನೀರು ಸಿಕ್ಕತಕ್ಕದ್ದು ಇರುತ್ತದೆ. ಅಂದರೆ ೨೦೦೦ನೇ ಇಸವಿಯೊಳಗೆ ಈ ನೀರನ್ನು ನಾವು ಉಪಯೋಗ ಮಾಡಿಕೊಳ್ಳದಿದ್ದರೆ ಕಷ್ಟವಾಗುತ್ತದೆ. ಏಕೆಂದರೆ ಅವರು ಪದೇ ಪದೇ ಡೆಲಿಗೇಷನ್ ತಂದು ನಿಮ್ಮನ್ನು ಕೇಳುತ್ತಿರುತ್ತಾರೆ. ಕೇಂದ್ರಸರ್ಕಾರದಿಂದ ಒತ್ತಾಯ ತರುತ್ತಾರೆ. ನಮ್ಮ ಬೆಳೆಯೆಲ್ಲಾ ಒಣಗಿಹೋಗುತ್ತಿದೆ ಬೆಳೆ ಸಂಪೂರ್ಣ ನಷ್ಟವಾಗುತ್ತಿವೆ ಆದ್ದರಿಂದ ದಯವಿಟ್ಟು ನೀರು ಕೊಡಿ ಎಂದು ಕೇಳುತ್ತಾರೆ. ಆಗ ಮಾನವೀಯತೆಯಿಂದ ನಾವು ನೀರನ್ನು ಕೊಡಲೇಬೇಕಾಗುತ್ತದೆ. ಇಂಥ ಒಂದು ಪರಿಸ್ಥಿತಿ ಉಂಟಾಗುತ್ತದೆ. ಕೃಷ್ಣಾ ಬೇಸಿನ್‌ನಲ್ಲಿ ವಿಂಡಿಯಂ ಇರಿಗೇಷನ್‌ಗೆ ಆಗಲಿ, ಮೇಜರ್ ಇರಿಗೇಷನ್ ಆಗಲಿ ಈ ಯೋಜನೆಗಳನ್ನು ಕಂಪ್ಲೀಟ್ ಮಾಡುವುದಕ್ಕೆ ತಾವು ಏನು ಯೋಜನೆಯನ್ನು ಹಾಕಿಕೊಂಡಿದ್ದೀರಿ ? ಎಷ್ಟು ಹಣವನ್ನೊದಗಿಸುತ್ತೀರಿ ಎಂಬುದನ್ನು ಹೇಳಬೇಕು. ಇವತ್ತು ವಿಶ್ವಬ್ಯಾಂಕ್‌ನಿಂದ ಏಯ್ಡ್ ಸಿಕ್ಕುತ್ತದೆ, ವಿಶ್ವ ಬ್ಯಾಂಕ್‌ನಿಂದ ಹೆಚ್ಚಿನ ಹಣವನ್ನು ತರುವುದಕ್ಕೆ ವ್ಯವಸ್ಥೆ ಇದೆ. ನೀವು ಇದಕ್ಕಾದರೂ ಏತಕ್ಕೆ ಮನಸ್ಸು ಮಾಡಲಿಲ್ಲ ? ನಾನ್ ಪ್ಲಾನ್ ಸ್ಕೀಂನಲ್ಲಿ ಬೇರೆ ಬೇರೆ ಯೋಜನೆಗಳಿವೆ. ಪ್ಲಾನ್‌ನಲ್ಲಿರುವುದಕ್ಕೆ ನೀವು ವಿಶ್ವ ಬ್ಯಾಂಕ್‌ನಿಂದ ಸಾಲವನ್ನು ತರುವುದಕ್ಕೆ ಸೂಕ್ತ ನೀತಿಯನ್ನು ರೂಪಿಸಿಕೊಂಡು ಅದನ್ನು ಒಂದು ರೂಪಕ್ಕೆ ತರುವುದಕ್ಕೆ ನೀವು ಏತಕ್ಕೆ ಮನಸ್ಸು ಮಾಡಲಿಲ್ಲ ? ಎನ್ನತಕ್ಕ ಬಗ್ಗೆ ನಮಗೆ ಉತ್ತರವನ್ನು ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ಖಾತೆಯ ಬೇಡಿಕೆ ಸಭೆಯ ಮುಂದೆ ಬಂದಾಗ ಇನ್ನೂ ವಿವರವಾದ ಚರ್ಚೆಯನ್ನು ಮಾಡುವುದಕ್ಕೆ ತಮಗೆ ಅವಕಾಶವಿದೆ. ತಾವು ವಿಶ್ವ ಬ್ಯಾಂಕ್‌ನ ಏಡ್ ಬಗ್ಗೆ ಹೇಳಿದಿರಿ. ನಿಜವಾಗಿಯೂ ಹೇಳಬೇಕಿಂದರೆ ವಿಶ್ವಬ್ಯಾಂಕ್‌ನಿಂದ ಏನು ಸಹಾಯ ಬರುತ್ತದೆ ಆ ಸಹಾಯ ಅನೇಕ ದೃಷ್ಟಿಯಿಂದ ಕ್ಲಿಷ್ಟವಾಗಿದೆ. ಅವರಂ ತಮ್ಮ ಪರತ್ತನ್ನು ಹಾಕುತ್ತಾರೆ. ಉದಾಹರಣೆಗೆ ಆರ್ಬಿಟ್ರೇಷನ್ ಕ್ಲಾಸ್ ಹಾಕುತ್ತಾರೆ. ಈ ಆರ್ಬಿಟ್ರೇಷನ್ ಕ್ಲಾಸ್ ಇರಲೇಬೇಕೆಂದು ಹೇಳುತ್ತಾರೆ. ತಮಗೇ ಗೊತ್ತಿರುವಂತೆ ನಾವು ಅಧಿಕಾರಕ್ಕೆ ಬಂದಮೇಲೆ ಮೊದಲನೇ ವರ್ಷದಲ್ಲೇ ಅನೇಕ ಕಂಟ್ರ್ಯಾಕ್ಟರ್‌ಗಳಿಗೆ ಅನೇಕ ಕೋಟಿರೂಪಾಯಿಗಳನ್ನು ಕೊಟ್ಟಿದ್ದೇವೆ. ಈಗ ವಿಶ್ವಬ್ಯಾಂಕ್‌ನವರು ಅಷ್ಟು ಸುಲಭವಾಗಿ ಸಾಲವನ್ನು ಕೊಡುವುದಿಲ್ಲ. ಈ ಸಾಲಕ್ಕಾಗಿ ಬಹಳಷ್ಟು ಸಾರಿ ಓಡಾಡಬೇಕು, ಅವರು ಇಲ್ಲಿಗೆ ಬಂದು ನೋಡಬೇಕು, ಇನ್‌ಸ್ಪೆಕ್ಟ್ ಮಾಡಬೇಕು, ಇಷ್ಟೆಲ್ಲಾ ಆದರೂ ಅವರು ಹಣವನ್ನು ಪೂರ್ತಿಯಾಗಿ ಕೊಡುವುದಿಲ್ಲ.

ಆದ್ದರಿಂದ ವರ್ಲ್ಡ್ ಬ್ಯಾಂಕ್‌ನಿಂದ ಸಹಾಯ ಸಿಗುತ್ತದೆಂದು ಹೇಳುವುದು ಬಹಳ ಸುಲಭ. ಮಾನ್ಯ ಜಾಫರ್ ಶರೀಫ್‌ರವರೂ ಕೂಡ ಎರಡು ವರ್ಷಗಳ ಹಿಂದೆ ಹೇಳಿದರು. ಗಲ್ಫ್ ಕಂಟ್ರೀಸ್‌ನಿಂದ ಹಣ ಸಿಗುವ ಸಾಧ್ಯತೆ ಇದೆ ೩-೪ ಯೋಜನೆಗಳನ್ನು ಬಜೆಟ್‌ನಲ್ಲಿ ಸೂಚನೆ ಮಾಡಿ ಎಂದು.

ಶ್ರೀ ಎಂ. ವೀಲ್ಲಿಕಾರ್ಜುನ ಸ್ವಾಮಿ.—ಇರಿಗೇಷನ್‌ಗೆ ಕೊಡುತ್ತೇವೆಂದು ಹೇಳಿದ್ದರೆ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಹೇಳಿದರು. ದುಡ್ಡನ್ನು ಕೊಡತಕ್ಕಂಥ ಸಂಸ್ಥೆಗಳು ಜನರೂ ಇದ್ದಾರೆ, ಇರಿಗೇಷನ್ ಪ್ರಾಜೆಕ್ಟ್ ಕೃಷ್ಣ ಬದಲು ಬೇರೆ ಯಾವುದಾದರೂ ಚಿಕ್ಕದು ೫೦-೬೦ ಕೋಟಿ

ರೂಪಾಯಿಗಳಿಗೆ ಆಗಂಪಂಥದ್ದು ಇದ್ದರೆ ಅದಕ್ಕೆ ಕೊಡುತ್ತೇವೆಂದು ಹೇಳಿದ್ದರು. ಶರಾಪತಿ ಟೇಲ್‌ರೇಸ್ ಸೂಚನೆ ಮಾಡಿದ್ದು ಅದರಲ್ಲಿ ಸ್ವಲ್ಪಮಟ್ಟಿಗೆ ಒಂದು ಪ್ರಪೋಸಲ್ಸ್ ಬಂದಿದೆ. ಬಹುಶಃ ನಮಗೆ ಅವರಿಂದ ಒಂದು ಆಶ್ವಾಸನೆ ಸಿಕ್ಕಬಹುದೆಂದು ಕಾಣುತ್ತದೆ. ಆದ್ದರಿಂದ ಬೇರೆ ಬೇರೆ ಸಂಘಸಂಸ್ಥೆಗಳು ಮತ್ತು ಫೈನಾನ್ಸ್ ಇನ್‌ಸ್ಟಿಟ್ಯೂಷನ್‌ಗಳಿಂದ ಹಣವನ್ನು ಕೊಡಲು ಮುಂದೆ ಬಂದರೆ ನಾವು ಅದನ್ನು ಸ್ವಾಗತ ಮಾಡುತ್ತೇವೆ. ವರ್ಲ್ಡ್ ಬ್ಯಾಂಕ್ ಏಡ್ ಮೇಲೆಯೇ ಅವಲಂಬಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಚರ್ಚೆ ಇಲ್ಲಿಗೆ ಮುಗಿಯಿತು, ಈಗ ಒಂದು ಪ್ರಕಟಣೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಸಿ.ಬಿ.ಐ., ಎನ್‌ಕ್ವಯರಿ ಮಾಡುವ ಬಗ್ಗೆ ಮಾನ್ಯ ಸಚಿವರು ಒಂದು ಆನೌನ್ಸ್‌ಮೆಂಟ್ ಇತ್ತು.

ಅಧ್ಯಕ್ಷರು.—ಹೇಳುತ್ತಾರೆ. ಹೇಳುವುದರೊಳಗೆ ಇದೊಂದು ಪ್ರಕಟಣೆಯನ್ನು ಪ್ರಕಟಿಸುತ್ತೇನೆ. ಪ್ರಕಟಿಸಿದ ಮೇಲೆ ನಾನು ರೂಲಿಂಗ್ ಕೊಡುತ್ತೇನೆ.

## ಶಾಸನ ರಚನಾ ಕಲಾಪಗಳು

## ೧೯೮೮ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ ವಿಧೇಯಕ).

### ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).— ಮಾನ್ಯ ಅಧ್ಯಕ್ಷರೇ ೧೯೮೮ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ವ ಎಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾಪ ಏನೆಂದರೆ ೧೯೮೮ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

### ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮಂತ್ರಿ ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು) — ಮಾನ್ಯ ಅಧ್ಯಕ್ಷರೇ ೧೯೮೮ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು — ವಿಧೇಯಕವನ್ನು ಮಂಡಿಸಲಾಗಿದೆ.*

### ೧೯೮೮ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ

### ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).— ಮಾನ್ಯ ಅಧ್ಯಕ್ಷರೇ ೧೯೮೮ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

---

* Annexure